ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01

**E-mail ID: icps.kar@gmail.com** **Phone No: 080-22879381**

ಸಂಖ್ಯೆ:ಐ.ಸಿ.ಪಿ.ಎಸ್/ಜೆಸಿಎಲ್/WP:4/2020/16/2020-21 ದಿನಾಂಕ: 07-08-2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ "ವಿದ್ಯಾಗಮ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು

ಉಲ್ಲೇಖ: ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಸಶಿಕಾ/ವಿದ್ಯಾಗಮ.ಅ/ 13497/2020-21 ದಿನಾಂಕ: 04.08.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಉಲ್ಲೇಖಿದನ್ವಯ ಸುತ್ತೋಲೆ ಬಂದಿದ್ದು, ಸದರಿ ಸುತ್ತೋಲೆಯಲ್ಲಿ "ವಿದ್ಯಾಗಮ" ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ತಿಳಿಸಲಾಗಿದೆ.

ಕೋವಿಡ್-19ರ ಹಿನ್ನಲೆಯಲ್ಲಿ 2020-21ನೇ ಸಾಲಿನ ಶಾಲೆಗಳು ತೆರೆಯದೇ ಇರುವುದರಿಂದ ಪರ್ಯಾಯ ಮಾರ್ಗಗಳ ಮೂಲಕ ಮಕ್ಕಳನ್ನು ನಿರಂತರವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದಕ್ಕಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯು "ವಿದ್ಯಾಗಮ" ಕಾರ್ಯಕ್ರಮವನ್ನು ಜಾರಿಗೆ ತಂದಿರುತ್ತದೆ. "ವಿದ್ಯಾಗಮ" ಕಾರ್ಯಕ್ರಮದ ಮಾರ್ಗದರ್ಶಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

ಈ ಕಾರ್ಯಕ್ರಮದ ಮೂಲಕ ಮಕ್ಕಳ ಪಾಲನಾ ಸಂಸ್ಥೆಗಳಿಂದ ಮನೆಗೆ ತೆರಳಿರುವ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸಲಬಹುದಾಗಿದ್ದು ಈ ಹಿನ್ನಲೆಯಲ್ಲಿ ತಾವುಗಳು ಸಂಬಂಧಿತ ಜಿಲ್ಲೆಗಳ ಜಿಲ್ಲಾ ಶಿಕ್ಷಣ ಅಧಿಕಾರಿಯನ್ನು ಸಂಪರ್ಕಿಸಿ, ಅವರ ಮೂಲಕ "ವಿದ್ಯಾಗಮ" ಕಾರ್ಯಕ್ರಮದ ಸೌಲಭ್ಯವು ಮಕ್ಕಳ ಪಾಲನಾ ಸಂಸ್ಥೆಗಳಿಂದ ಮನೆಗೆ ತೆರಳಿರುವ ಮಕ್ಕಳಿಗೆ ದೊರಕುವಂತೆ ಮಾಡಲು ತಿಳಿಸಿದೆ.

ಸದರಿ ಯೋಜನೆಯ ಅನುಷ್ಠಾನದ ಕುರಿತು ಅನುಪಾಲನೆಯನ್ನು ಪ್ರತೀನಿತ್ಯ ವಾಟ್ಸಅಪ್ ಗ್ರೂಪ್‌ನಲ್ಲಿ ಹಾಗೂ ವಾರಕ್ಕೊಮ್ಮೆ ಇಲಾಖೆಗೆ ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ
07.08.2020
ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು

REDMI NOTE 8
AI QUAD CAMERA

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ
C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು–01
**E-mail ID: icps.kar@gmail.com** **Phone No: 080-22879382**

ಸಂಖ್ಯೆ:ಐ.ಸಿ.ಪಿ.ಎಸ್/ಜೆಸಿಎಲ್/WP:4/2020/16/2020–21 ದಿನಾಂಕ: 08–08–2020

ರಾಜ್ಯ ಯೋಜನಾ ನಿರ್ದೇಶಕರು
ಸರ್ವಶಿಕ್ಷಣ ಅಭಿಯಾನ
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೇ,

ವಿಷಯ: ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸುವ ಕುರಿತು
ಉಲ್ಲೇಖ: 1. ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಸಶಿಕಾ/ವಿದ್ಯಾಗಮ.ಅ/ 13497/2020–21 ದಿನಾಂಕ: 04.08.2020
2. ಈ ಕಚೇರಿಯ ಇದೇ ಪತ್ರದ ಸಮಸಂಖ್ಯೆ ದಿನಾಂಕ: 07.08.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರನ್ವಯ "ವಿದ್ಯಾಗಮ" ಕಾರ್ಯಕ್ರಮದ ಅನುಷ್ಠಾನದ ಕುರಿತ ಸುತ್ತೋಲೆಯು ದೊರೆತಿದ್ದು, ಅದರ ಅನುಷ್ಠಾನದ ಕುರಿತು ಈಗಾಗಲೇ ಉಲ್ಲೇಖ(2)ರನ್ವಯ ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರುಗಳಿಗೆ ಪತ್ರ ಬರೆಯಲಾಗಿದೆ. (ಪತ್ರದ ಪ್ರತಿಯನ್ನು ಲಗತ್ತಿಸಿದೆ)

ಮಕ್ಕಳ ಪಾಲನಾ ಸಂಸ್ಥೆಗಳಿಂದ ಮನೆಗಳಿಗೆ ತೆರಳಿರುವ ಮಕ್ಕಳಿಗೆ ಶಿಕ್ಷಣ ನೀಡುವ ನಿಟ್ಟಿನಲ್ಲಿ ತೊಂದರೆಯಾಗುತ್ತಿದ್ದು, ಸದರಿ ಮಕ್ಕಳಿಗೂ ಸಹ ಶಿಕ್ಷಣ ದೊರಕುವಲ್ಲಿ "ವಿದ್ಯಾಗಮ" ಸಹಕಾರಿಯಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬರುವ ಮಕ್ಕಳಿಗೆ ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಎದುರಾಗಬಹುದಾದ ತೊಡಕುಗಳನ್ನು ಆಗಿಂದಾಗ್ಗೆ ಬಗೆಹರಿಸಲು ಅನುಕೂಲವಾಗುವಂತೆ ಸಹಕರಿಸಲು ಸರ್ವಶಿಕ್ಷಣ ಅಭಿಯಾನದ ವತಿಯಿಂದ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಕೋರಿದೆ.

ತಮ್ಮ ವಿಶ್ವಾಸಿ
08.08.2020
ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು

REDMI NOTE 8
AI QUAD CAMERA

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.**

ಸಂಖ್ಯೆ : ಸಶಿಕಾ/ವಿದ್ಯಾಗಮ.ಅ/13497/2020-21

ದಿನಾಂಕ: 4.8.2020

**-: ಸುತ್ತೋಲೆ :-**

ವಿಷಯ : "ವಿದ್ಯಾಗಮ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ : 1) ಈ ಕಛೇರಿಯ ಸುತ್ತೋಲೆ ಸಮ ಸಂಖ್ಯೆ : ಸಹನಿಶಾಶಿ.ಆಶಾ/ಕ.ವ.ಕು.ಜಾ.ಸು/32544/ಇ.ವಿ/2020-21, ದಿನಾಂಕ: 3.8.2020

2) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಶಿಕಾ/ವಿದ್ಯಾಗಮ.ಅ/13497/2020-21 ದಿನಾಂಕ: 04-08-2020.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸುತ್ತೋಲೆಯಲ್ಲಿ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳನ್ನು ದಿನಾಂಕ : 31-8-2020ರವರೆಗೆ ಮುಚ್ಚಿರತಕ್ಕದ್ದು ಎಂದು ತಿಳಿಸಲಾಗಿದೆ. ಆದರೆ, ಯಾವುದೇ ಶಿಕ್ಷಕರು ಹಾಗೂ ಅಧಿಕಾರಿಗಳಿಗೆ ರಜೆಯನ್ನು ಘೋಷಣೆ ಮಾಡಿರುವುದಿಲ್ಲ.

ಪ್ರತಿ ವರ್ಷವೂ ಶೈಕ್ಷಣಿಕ ಚಟುವಟಿಕೆಗಳು ಜೂನ್ ಮಾಹೆಯಿಂದ ಪ್ರಾರಂಭವಾಗುತ್ತಿತ್ತು. ಆದರೆ, ಕೋವಿಡ್-19 ರ ಹಿನ್ನೆಲೆಯಲ್ಲಿ ನಿಗದಿತ ಅವಧಿಯಲ್ಲಿ ಶಾಲೆಗಳು ಪ್ರಾರಂಭವಾಗದೇ ಆಗಸ್ಟ್ 31 ರವರೆಗೆ ಶಾಲೆಗಳನ್ನು ಮುಚ್ಚಲ್ಪಟ್ಟಿರುತ್ತವೆ. 2020-21ನೇ ಸಾಲಿನ ಶಾಲೆಗಳು 3 ತಿಂಗಳವರೆಗೆ ತೆರೆಯದೇ ಇರುವುದರಿಂದ, ಪರ್ಯಾಯ ಮಾರ್ಗಗಳ ಮೂಲಕ ಮಕ್ಕಳನ್ನು ನಿರಂತರವಾಗಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಉಲ್ಲೇಖ (2) ರ "ವಿದ್ಯಾಗಮ" ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಮಕ್ಕಳು ನಿರಂತರವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಅಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸದರಿ ಕಾರ್ಯಕ್ರಮದಡಿ ವಿವರಿಸಲಾಗಿದೆ. ಅದರಂತೆ, ರಾಜ್ಯದ ಎಲ್ಲಾ ಶಾಲೆಗಳ ಶಿಕ್ಷಕರುಗಳು / ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗುವಂತೆ ಈ ಮೂಲಕ ನಿರ್ದೇಶಿಸಲಾಗಿದೆ.

ಈಗಾಗಲೇ ಕೋವಿಡ್-19 ಕಾರ್ಯಕ್ಕೆ ನಿಯೋಜಿತ ಶಿಕ್ಷಕರುಗಳನ್ನು "ವಿದ್ಯಾಗಮ" ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳದಂತೆ ಸೂಚಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ :

1. ಅಪರ ಆಯುಕ್ತರು, ಧಾರವಾಡ / ಕಲ್ಬುರ್ಗಿ, ತಮ್ಮ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಿದೆ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರುಗಳು ಸದರಿ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಹಾಗೂ ಈ ಕಾರ್ಯಕ್ರಮದ ಬಗ್ಗೆ ವ್ಯಾಪಕವಾದ ಪ್ರಚಾರವನ್ನು ನೀಡಲು ಅಗತ್ಯ ಕ್ರಮ ವಹಿಸಲು ತಿಳಿಸಿದೆ.
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರುಗಳಿಗೆ ಅಗತ್ಯ ಕ್ರಮಕ್ಕಾಗಿ (ಉಪನಿರ್ದೇಶಕರ ಮೂಲಕ)
4. ಎಲ್ಲಾ ಶಾಲಾ ಮುಖ್ಯ ಶಿಕ್ಷಕರು / ಆಡಳಿತ ಮಂಡಳಿಯವರಿಗೆ ಅಗತ್ಯ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

ಪ್ರತಿಯನ್ನು ಗೌರವಗಳೊಂದಿಗೆ

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಮಾನ್ಯ ಸಚಿವರ ಅವಗಾಹನೆಗೆ ತರಲು ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ

**ಸಮಗ್ರ ಶಿಕ್ಷಣ ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಕಟ್ಟಡಗಳ
ಪೂರಕ ಕಟ್ಟಡ ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ : ಸಶಿಕಾ/ವಿದ್ಯಾಗಮ.ಅ/13497/2020-21 ದಿನಾಂಕ : 04.08.2020

## -: ಸುತ್ತೋಲೆ :-

**ವಿಷಯ :** ರಾಜ್ಯದ ಶಾಲೆಗಳಲ್ಲಿ **"ವಿದ್ಯಾಗಮ"** ನಿರಂತರ ಕಲಿಕಾ ಕಾರ್ಯಕ್ರಮದ ಮಾರ್ಗದರ್ಶಿ ಹೊರಡಿಸುವ ಬಗ್ಗೆ.

* **

2020-21ನೇ ಸಾಲಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗಬೇಕಾಗಿದ್ದು, ಕೋವಿಡ್-19ರ ಹಿನ್ನೆಲೆಯಲ್ಲಿ ಮುಂಜಾಗ್ರತವಾಗಿ ಶಾಲೆಗಳನ್ನು ಪ್ರಾರಂಭಿಸದೆ ಇರುವ ಸಂದರ್ಭದಲ್ಲಿ, ಮಕ್ಕಳು ಶಾಲೆಯಿಂದ ದೂರ ಉಳಿಯಬೇಕಾದ ಅನಿವಾರ್ಯತೆ ಎದುರಾಗಿದ್ದರಿಂದ ಮಕ್ಕಳ ಔಪಚಾರಿಕ ಕಲಿಕೆಗೆ ಹಿನ್ನಡೆ ಉಂಟಾಗಿದೆ. ಈ ಸನ್ನಿವೇಶವು ಮಕ್ಕಳ ಮುಂದಿನ ಕಲಿಕಾ ನಿರಂತರತೆಗೆ ಪರಿಣಾಮ ಬೀರದಂತೆ ಎಚ್ಚರವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆ ಔಪಚಾರಿಕ ಶಿಕ್ಷಣಕ್ಕೆ ಪರ್ಯಾಯವಾಗಿ ಮಕ್ಕಳನ್ನು ಶಾಲೆಯೊಂದಿಗೆ ನಿರಂತರ ಸಂಪರ್ಕದಲ್ಲಿ ಇಟ್ಟುಕೊಳ್ಳುವ ಹಾಗೂ ಅವರಲ್ಲಿ ನಿರಂತರ ಕಲಿಕೆಯನ್ನು, ಸ್ವಯಂ ಕಲಿಕಾ ವಿಧಾನಗಳ ಮೂಲಕ ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸಲು **"ವಿದ್ಯಾಗಮ"** ಎನ್ನುವ ಕಲಿಕಾ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಅನುಷ್ಠಾನಗೊಳಿಸಲು ರೂಪಿಸಲಾಗಿದೆ.

## "ವಿದ್ಯಾಗಮ" ನಿರಂತರ ಕಲಿಕಾ ಕಾರ್ಯಕ್ರಮ

❖ **ದೂರದೃಷ್ಟಿ – *"ಪ್ರತೀ ಮಗುವಿನ ಭವಿಷ್ಯದ ಕನಸಿಗೆ ಯಾವುದೇ ನೈಸರ್ಗಿಕ ವಿಕೋಪ, ಮಹಾಮಾರಿ ಇನ್ನಾವುದೇ ಅಡಚಣೆಗಳು ಅಡ್ಡಿಯಾಗದಂತೆ ನನಸಾಗಿಸುವುದು".***

❖ **ಧ್ಯೇಯೋದ್ದೇಶ :**

- ಶಾಲೆ ಮುಚ್ಚಿರುವ ಸಮಯದಲ್ಲಿಯೂ ಮಕ್ಕಳ ನಿರಂತರ ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸುವುದು.
- ಪ್ರತಿ ಮಗುವೂ ಕಲಿಕಾ ವ್ಯಾಪ್ತಿಯಲ್ಲಿ ಬರುವಂತೆ ಕಾರ್ಯಯೋಜನೆ ರೂಪಿಸುವುದು.
- ಕೋವಿಡ್ ಹಿನ್ನಲೆಯಲ್ಲಿ ಭೌತಿಕವಾಗಿ ಶಾಲೆಗಳನ್ನು ಪ್ರಾರಂಭಿಸುವವರೆಗೂ ಶಿಕ್ಷಕರು ಮಕ್ಕಳೊಂದಿಗೆ ನಿರಂತರ ಸಂಪರ್ಕದಲ್ಲಿರುವುದು.
- ಮಕ್ಕಳಲ್ಲಿ ಮಾರ್ಗದರ್ಶಿತ ಸ್ವಯಂ ಕಲಿಕೆಯನ್ನು ಪ್ರೇರೇಪಿಸಲು ಪಠ್ಯ ಪುಸ್ತಕಗಳನ್ನು, ಅವಶ್ಯ ಅಭ್ಯಾಸ ಪುಸ್ತಕಗಳು / ಅಭ್ಯಾಸ ಹಾಳೆಗಳು ಮುಂತಾದವುಗಳನ್ನು ಮಕ್ಕಳಿಗೆ ಪೋಷಕರ ಮೂಲಕ ತಲುಪಿಸುವುದು.

- ಸರ್ಕಾರಿ ಮತ್ತು ಅನುದಾನಿತ ಶಾಲಾ ಮಕ್ಕಳಿಗೆ ಪೌಷ್ಠಿಕಾಂಶದ ಅಗತ್ಯತೆಗಳನ್ನು ಪೂರೈಸಲು ಮಧ್ಯಾಹ್ನದ ಉಪಹಾರ ಮತ್ತು ಕ್ಷೀರಭಾಗ್ಯ ಯೋಜನೆಯ ಸಾಮಗ್ರಿಯನ್ನು ಮಕ್ಕಳ ಮನೆಗಳಿಗೆ ತಲುಪಿಸುವುದು.
- ಬಾಲ ಕಾರ್ಮಿಕ, ಬಾಲ್ಯ ವಿವಾಹ ಇತ್ಯಾದಿ ಸಾಮಾಜಿಕ ಪಿಡುಗುಗಳಿಗೆ ಮಕ್ಕಳು ಒಳಗಾಗುವುದನ್ನು ತಡೆಗಟ್ಟುವುದು.
- ಶಾಲೆಗಳು ಮುಚ್ಚಿರುವ ಸಮಯದಲ್ಲಿ ಶಿಕ್ಷಕರ ಮೂಲಕ ಮಕ್ಕಳ ಮನೋಸ್ಥೈರ್ಯವನ್ನು ವೃದ್ಧಿಸುವುದು.
- ಶಾಲೆಯಿಂದ ಮಕ್ಕಳು ಹೊರಗುಳಿಯದಂತೆ ಖಾತ್ರಿಪಡಿಸಿಕೊಳ್ಳುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮತ್ತು ವಲಸೆ ಮಕ್ಕಳ ಅವಶ್ಯಕತೆಗಳಿಗೆ ವಿಶೇಷ ಆದ್ಯತೆ ನೀಡುವುದು.
- ಶಿಕ್ಷಕರು, ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರು, ಆಡಳಿತ ಮಂಡಳಿಯವರು, ಸ್ವಯಂ ಸೇವಕರು, ಪೋಷಕರು ಹಾಗೂ ಸಮುದಾಯದ ಎಲ್ಲಾ ಭಾಗೀದಾರರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು.

❖ **ಕಾಲ್ಪನಿಕ ಕಲಿಕಾ ಕೋಣೆ :**

- ಪ್ರತಿ ಶಾಲೆಯು 20 ರಿಂದ 25 ಮಕ್ಕಳಿಗೆ ಒಬ್ಬ ಮಾರ್ಗದರ್ಶಿ ಶಿಕ್ಷಕರನ್ನು ನೇಮಿಸಿ ಕಾಲ್ಪನಿಕ ಕಲಿಕಾ ಕೋಣೆಯನ್ನು ರೂಪಿಸುವುದು.
- ಶಾಲೆಯಲ್ಲಿರುವ ಮಕ್ಕಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ ಕಲಿಕಾ ಕೋಣೆಯ ಮಕ್ಕಳ ಸಂಖ್ಯೆಯನ್ನು ಬದಲಿಸಬಹುದು.
- ಕರಾವಳಿ, ಮಲೆನಾಡು ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ದೂರ ದೂರ ಮನೆಗಳಿರುವುದರಿಂದ ಪ್ರತೀ ಮಾರ್ಗದರ್ಶಿ ಶಿಕ್ಷಕರಿಗೆ 10 ರಿಂದ 15 ವಿದ್ಯಾರ್ಥಿಗಳನ್ನು ನೇಮಿಸಬಹುದಾಗಿರುತ್ತದೆ.
- ಕಾಲ್ಪನಿಕ ಕಲಿಕಾ ಕೋಣೆಯನ್ನು ರೂಪಿಸುವಾಗ ತರಗತಿವಾರು ಮಕ್ಕಳನ್ನು ಹಂಚಿಕೆ ಮಾಡದೇ ಶಾಲೆಯಲ್ಲಿರುವ ಒಟ್ಟು ತರಗತಿಗಳನ್ನು ಹಾಗೂಮಕ್ಕಳ ವಾಸ ಸ್ಥಳದ ಭೌಗೋಳಿಕ ಪ್ರದೇಶವನ್ನು ಆಧರಿಸಿಹಂಚಿಕೆಯನ್ನು ಮಾಡುವುದು. ಅಂದರೆ 1 ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ ಹಾಗೂ 8 ರಿಂದ 10ನೇ ತರಗತಿ ಮಕ್ಕಳನ್ನು ವಾಸ ಸ್ಥಳದ ಆಧಾರದ ಮೇಲೆ ಒಗ್ಗೂಡಿಸಿ ಹಂಚಿಕೆ ಮಾಡುವುದು ಮತ್ತುಮಾರ್ಗದರ್ಶಿ ಶಿಕ್ಷಕರನ್ನು ನೇಮಿಸುವುದು.
- ಮಾರ್ಗದರ್ಶಿ ಶಿಕ್ಷಕರು ತಮ್ಮ ವ್ಯಾಪ್ತಿಯಲ್ಲಿ ದಾಖಲಾತಿ ಆಂದೋಲನದ ಮೂಲಕ ಶಾಲೆಯಿಂದ ಹೊರಗುಳಿದ 6 ರಿಂದ 14 ವಯಸ್ಸಿನ ಯಾವುದಾದರೂ ಮಕ್ಕಳಿದ್ದಲ್ಲಿ ವಯೋಮಾನಕ್ಕೆ ಅನುಗುಣವಾಗಿ ದಾಖಲಾತಿ ಮಾಡಿಕೊಳ್ಳುವುದು.
- ಮಾರ್ಗದರ್ಶಿ ಶಿಕ್ಷಕರು ತಮಗೆ ವಹಿಸಿರುವ ಒಟ್ಟು ಮಕ್ಕಳ ಪೈಕಿ ಭೌಗೋಳಿಕ ಪ್ರದೇಶವನ್ನು ಆಧರಿಸಿ ಅಕ್ಕಪಕ್ಕ ಮನೆಯಿರುವ ಮಕ್ಕಳನ್ನು ಒಗ್ಗೂಡಿಸಿ ಚಿಕ್ಕಕಲಿಕಾ ತಂಡ ಅಂದರೆ "ನೆರೆಹೊರೆ / ವಠಾರ" ಗುಂಪುಗಳನ್ನು ರಚಿಸುವುದು.

❖ **ಕಲಿಕಾ ಸಾಮಗ್ರಿ :**

- ನಿಗದಿತ ದಿನಾಂಕದಂದು 'ನೆರೆಹೊರೆ' ತಂಡವಾರು ಮಕ್ಕಳು ಹಾಗೂ ಪೋಷಕರನ್ನು ಶಾಲೆಗೆ ಬರಮಾಡಿಕೊಳ್ಳುವುದು.
- ಮಕ್ಕಳು ಮತ್ತು ಪೋಷಕರು ನಿರ್ದಿಷ್ಟ ಕೊಠಡಿಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಕುಳಿತುಕೊಳ್ಳಲು ಆಸನದ ವ್ಯವಸ್ಥೆಯನ್ನು ಕಲ್ಪಿಸುವುದು.
- ಆಸೀನರಾಗಿರುವ ಎಲ್ಲಾ ಪೋಷಕರಿಗೆ / ಮಕ್ಕಳಿಗೆ ಸರ್ಕಾರದಿಂದ ಈಗಾಗಲೇ ಪೂರೈಸಿರುವ ಕಲಿಕಾ ಸಾಮಗ್ರಿಗಳಾದ ಪಠ್ಯಪುಸ್ತಕ, ಅಭ್ಯಾಸ ಪುಸ್ತಕ, ದಿನಚರಿ, ಇತ್ಯಾದಿಗಳನ್ನು ನೀಡಿ ಸ್ವೀಕೃತಿ ಪಡೆಯುವುದು.
- ಪೂರೈಸಿರುವ ಕಲಿಕಾ ಸಾಮಗ್ರಿಗಳನ್ನು ಬಳಸಿಕೊಂಡು ಮನೆಯಲ್ಲಿಯೇ ಸ್ವ-ಕಲಿಕೆಯನ್ನು ಮುಂದುವರೆಸಲು ಮಕ್ಕಳಿಗೆ ಮತ್ತು ಪೋಷಕರಿಗೆ ವಿವರವಾದ ಮಾರ್ಗದರ್ಶನವನ್ನು ನೀಡುವುದು.

❖ **ಪಠ್ಯಕ್ರಮ :**

- ಕೋವಿಡ್-19 ಸಾಂಕ್ರಾಮಿಕ ರೋಗದ ಹರುಡುವಿಕೆಯನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವಂತೆ ಸಾಹಿತ್ಯ (Module) ರಚಿಸಲು ಹಾಗೂ ಬಹುತೇಕ ಮಕ್ಕಳ ಮೇಲೆ ಮಾನಸಿಕ ಒತ್ತಡ ಇರುವುದರಿಂದ ಪ್ರಸ್ತುತ ಸಾಲಿಗೆ ತರಗತಿವಾರು ಪಠ್ಯಕ್ರಮವನ್ನು ನಿಗದಿಪಡಿಸಲು ತಜ್ಞರ ಸಮಿತಿಯನ್ನು ಡಿ.ಎಸ್.ಇ.ಆರ್.ಟಿ ಹಾಗೂ ಕರ್ನಾಟಕ ಪಠ್ಯ ಪುಸ್ತಕ ಸಂಘದಿಂದ ರಚಿಸಲಾಗಿತ್ತು.
- ಆದರೆ ಪ್ರಸ್ತುತ ಶೈಕ್ಷಣಿಕ ವರ್ಷಕ್ಕೆ ಪಠ್ಯಪುಸ್ತಕಗಳನ್ನು ಕರೋನಾ ಮಹಾಮಾರಿ ಆವರಿಸುವ ಮುನ್ನವೇ ಮುದ್ರಿಸಲಾಗಿರುವುದರಿಂದ, ಮಕ್ಕಳಲ್ಲಿ ಜಾಗೃತಿ ಮೂಡಿಸುವಂತೆ ಸಾಹಿತ್ಯ (Module) ಮತ್ತು ನಿಗದಿ ಪಡಿಸಿರುವ ಪಠ್ಯಪುಸ್ತಕಗಳನ್ನು ತರಗತಿವಾರು ವಿಷಯವಾರು ಕರ್ನಾಟಕ ಪಠ್ಯಪುಸ್ತಕ ಸಂಘದ ಅಂತರ್ಜಾಲ ತಾಣದಲ್ಲಿ (www.ktbs.kar.nic.in ಮತ್ತು www.dsert.kar.nic.in) ನೀಡಲಾಗಿದೆ. ಎಲ್ಲಾ ಶಾಲೆಯ ಮಾರ್ಗದರ್ಶಿ ಶಿಕ್ಷಕರು ಕೋವಿಡ್-19 ಸಾಂಕ್ರಾಮಿಕ ರೋಗದ ಹರಡುವಿಕೆಯನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಮಾಡ್ಯೂಲ್‌ನಲ್ಲಿ ಸೂಚಿಸಿರುವ ಚಟುವಟಿಕೆಗಳಂತೆ ಹಾಗೂ ನಿಗದಿಪಡಿಸಿರುವ ಪಠ್ಯಕ್ರಮದಂತೆ ಮುಂದಿನ ಕ್ರಮವಹಿಸುವುದು.
- ರಾಜ್ಯದ ಎಲ್ಲಾ ಶಾಲೆಗಳಿಗೆ ಏಕರೂಪದ 'ವಾರ್ಷಿಕ ಕಾರ್ಯ ಯೋಜನೆ'ಯನ್ನು ತರಗತಿವಾರು ವಿಷಯವಾರು ರಾಜ್ಯ ಮಟ್ಟದಲ್ಲಿ ಸಿದ್ಧಪಡಿಸಿ ಕರ್ನಾಟಕ ಪಠ್ಯಪುಸ್ತಕ ಸಂಘದ ಅಂತರ್ಜಾಲ ತಾಣದಲ್ಲಿ (www.ktbs.kar.nic.in ಮತ್ತು www.dsert.kar.nic.in) ನೀಡಲಾಗಿದೆ. ಎಲ್ಲಾ ಶಾಲೆಯ ಮಾರ್ಗದರ್ಶಿ ಶಿಕ್ಷಕರು ಕಡ್ಡಾಯವಾಗಿ ಸದರಿ ವಾರ್ಷಿಕ ಕಾರ್ಯ ಯೋಜನೆಯ ಅನುಸಾರ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.

❖ **ಮಧ್ಯಾಹ್ನ ಉಪಹಾರ :**

- ಶಾಲೆಗಳು ಪ್ರಾರಂಭವಾಗುವವರೆಗೂ ಪ್ರತಿ ತಿಂಗಳ ಮೊದಲನೇ ವಾರದಲ್ಲಿ 'ನೆರೆಹೊರೆ' ತಂಡವಾರು ಮಕ್ಕಳು ಮತ್ತು ಪೋಷಕರನ್ನು ಶಾಲೆಗೆ ಬರಮಾಡಿಕೊಳ್ಳುವುದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
- ಒಂದು ತಿಂಗಳಿನ ಪೂರ್ಣ ಪ್ರಮಾಣದ ಆಹಾರ ಧಾನ್ಯಗಳನ್ನು ಪೋಷಕರಿಗೆ ನೀಡಿ ಮನೆಯಲ್ಲಿ ಮಕ್ಕಳಿಗೆ ಸಮತೋಲನ ಆಹಾರ ಒದಗಿಸುವ ಪ್ರಾಮುಖ್ಯತೆಯ ಬಗ್ಗೆ ಅರಿವು ಮೂಡಿಸುವುದು.
- ಈ ಸಂದರ್ಭದಲ್ಲಿ ಮಕ್ಕಳ ಮತ್ತು ಪೋಷಕರ ಉಪಸ್ಥಿತಿಯನ್ನು ಸದ್ಬಳಕೆ ಮಾಡಿಕೊಂಡು ಮಕ್ಕಳು ಕಲಿಕೆಯಲ್ಲಿ ಮಾಡಿರುವ ಪ್ರಗತಿಯನ್ನು ಚರ್ಚಿಸುವುದು ಹಾಗೂ ಪರಿಹಾರೋಪಾಯ ಸಲಹೆಗಳನ್ನು ನೀಡುವುದು.

❖ **ಮಕ್ಕಳು ಹಾಗೂ ಮಾರ್ಗದರ್ಶಿ ಶಿಕ್ಷಕರ ನಡುವಿನ ಸಂಪರ್ಕ :**

- ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆ ಮಾಡಿರುವ ವಿದ್ಯಾರ್ಥಿಗಳ ಮನೆಯಲ್ಲಿ ಲಭ್ಯವಿರುವ ಸಂಪರ್ಕ ಸಾಧನಗಳ ಬಗ್ಗೆ ಸಂಕ್ಷಿಪ್ತ ಸಮೀಕ್ಷೆ ಕೈಗೊಳ್ಳುವುದು.
- ಸಮೀಕ್ಷೆಯ ನಂತರ ಲಭ್ಯವಿರುವ ತಂತ್ರಜ್ಞಾನ ಆಧಾರಿತ ಸಾಧನಗಳ ಮೇಲೆ ಈ ಕೆಳಕಂಡ ರೀತಿಯ ಕಾಲ್ಪನಿಕ ಕಲಿಕಾ ಕೋಣೆಗಳನ್ನು ರೂಪಿಸುವುದು.

❖ **ತರಗತಿ ವಿಧ–1 – ಯಾವುದೇ ತಂತ್ರಜ್ಞಾನ ಆಧಾರಿತ ಸಾಧನಗಳು ಇಲ್ಲದ (ಮೊಬೈಲ್‌ರಹಿತ) ಮಕ್ಕಳ ತರಗತಿ:**

- ಮಾರ್ಗದರ್ಶಿ ಶಿಕ್ಷಕರು 'ನೆರೆಹೊರೆ' ಗುಂಪುವಾರು ಮಕ್ಕಳನ್ನು ವಾರಕ್ಕೆ ಸಾಧ್ಯವಾದಷ್ಟು ಬಾರಿ ಕನಿಷ್ಠ ವಾರಕ್ಕೆ ಒಂದು ಬಾರಿಯಾದರೂ ಕಡ್ಡಾಯವಾಗಿ ಭೇಟಿ ಮಾಡಿ ಮಕ್ಕಳಿಗೆ ಮುಂದಿನ ವಾರದ ವೇಳಾಪಟ್ಟಿಯನ್ನು ನೀಡಿ, ಮಕ್ಕಳು ಸ್ವಯಂ ಕಲಿಕೆಗೆ ಪೂರಕವಾಗಿ ಮಾರ್ಗದರ್ಶನ ನೀಡುವುದು. ಹಿಂದಿನ ವಾರದ ವೇಳಾಪಟ್ಟಿಯಂತೆ ಮಕ್ಕಳ ಕಲಿಕಾ ಪ್ರಗತಿಯನ್ನು ಅವಲೋಕಿಸಿ ಸಂದೇಹ ಅಥವಾ ಸಂಶಯಗಳಿದ್ದಲ್ಲಿ ಬಗೆಹರಿಸುವುದು.
- ಸದರಿ ಭೇಟಿಗಳನ್ನು ಸಮುದಾಯ ಭವನ / ಧಾರ್ಮಿಕ ಸ್ಥಳ / ಸೂಕ್ತ ಮರದ ನೆರಳಿನಲ್ಲಿ ದೈಹಿಕ ಅಂತರವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ನಡೆಸುವುದು
- ಸ್ವಯಂಸೇವಕರು / ಸರ್ಕಾರೇತರ ಸಂಸ್ಥೆಗಳು – ಪ್ರತಿಯೊಂದು ನೆರೆಹೊರೆ ಗುಂಪಿಗೆ ಆ ಪ್ರದೇಶದಲ್ಲಿ ನಿವಾಸಿಯಾಗಿರುವ ವಿದ್ಯಾವಂತ ಯುವಕ / ಯುವತಿಯರನ್ನು ಗುರುತಿಸಿ ಸ್ವಯಂಸೇವಕರನ್ನಾಗಿ ನೇಮಿಸಿ ಸದರಿ ಸ್ವಯಂಸೇವಕರು **ಮಾರ್ಗದರ್ಶಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ** ನೆರೆಹೊರೆ ಗುಂಪಿನ ಮಕ್ಕಳಿಗೆ ಪಾಠ ಪ್ರವಚನ ಕೈಗೊಳ್ಳುವುದು. ತಮ್ಮ ವ್ಯಾಪ್ತಿಯಲ್ಲಿರುವ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವನ್ನೂ ಸಹಾ ಪಡೆಯುವುದು.
- ಹಿರಿಯ ತರಗತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಮಾರ್ಗದರ್ಶಿ ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಕಿರಿಯ ತರಗತಿಯ ವಿದ್ಯಾರ್ಥಿಗಳಿಗೆ ಕಲಿಕೆಗೆ ನೆರವಾಗುವುದು.
- ನೆರೆಹೊರೆಯ ಮಕ್ಕಳಿಗೆ ಮಾರ್ಗದರ್ಶಿ ಶಿಕ್ಷಕರ ಬಳಿ ಅಥವಾ ಸ್ವಯಂ ಸೇವಕರ ಬಳಿ ಲಭ್ಯವಿರುವ ತಂತ್ರಜ್ಞಾನಾಧಾರಿತ ಸಲಕರಣೆಗಳನ್ನು (ಸ್ಮಾರ್ಟ್ ಫೋನ್, ಲ್ಯಾಪ್‌ಟಾಪ್, ಇತ್ಯಾದಿ)

ಬಳಸಿ ಮಕ್ಕಳು ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಅರ್ಥೈಸಿಕೊಳ್ಳಲು ದೃಕ್-ಶ್ರವಣ (Audio Visual)ಮಾಧ್ಯಮದ ಮೂಲಕ ಕಲಿಸುವುದು.

- ಈ ಸಂದರ್ಭದಲ್ಲಿ ದೈಹಿಕ ಅಂತರವನ್ನು ಮತ್ತು ಎಲ್ಲಾ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸುವುದು.

❖ **ತರಗತಿ ವಿಧ–2 – ಇಂಟರ್‌ನೆಟ್ ರಹಿತ ಮೊಬೈಲ್ ಫೋನ್ ಹೊಂದಿರುವ ತರಗತಿ :**

- ಬಹುತೇಕ ಮೋಬೈಲ್ ಫೋನ್‌ಗಳು ಪೋಷಕರದ್ದಾಗಿದ್ದು, ಪೋಷಕರು ಸಾಮಾನ್ಯವಾಗಿ ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಕೆಲಸಕ್ಕೆ ಹೋಗುವುದರಿಂದ, ಮೊಬೈಲ್ ಪೋಷಕರ ಬಳಿ ಇರುತ್ತದೆ. ಆದ್ದರಿಂದ ಮಾರ್ಗದರ್ಶಿ ಶಿಕ್ಷಕರು ಬೆಳಗ್ಗೆ 9 ರವರೆಗೆ ಹಾಗೂ ಸಂಜೆ 6ರ ನಂತರ ಮಕ್ಕಳಿಗೆ ಫೋನ್‌ಗಳು ಲಭ್ಯವಾಗುವುದರಿಂದ ಸದರಿ ಸಮಯವನ್ನು ಈ ಕೆಳಗಿನಂತೆ ಸದುಪಯೋಗಪಡಿಸಿಕೊಳ್ಳುವುದು.
- ಬೆಳಗ್ಗೆ 9 ಗಂಟೆ ಮುಂಚಿತವಾಗಿ ಎಸ್.ಎಮ್.ಎಸ್ ಮೂಲಕ ಆ ದಿನ ಮಾಡಬೇಕಾದ ಚಟುವಟಿಕೆಗಳನ್ನು ಹಾಗೂ ಅದಕ್ಕೆ ಪೂರಕವಾದ ಅಭ್ಯಾಸಗಳನ್ನು ಮಾಡಲು ಪೋಷಕರ ಮೂಲಕ ಮಕ್ಕಳಿಗೆ ಸೂಚಿಸುವುದು.
- ಮಕ್ಕಳು ಆ ದಿನ ನೀಡಿರುವ ಚಟುವಟಿಕೆಗಳನ್ನು ಹಾಗೂ ಅಭ್ಯಾಸಗಳನ್ನು ಪೂರ್ಣಗೊಳಿಸಿರಬೇಕು ಮತ್ತು ಪೋಷಕರು ಮನೆಗೆ ಹಿಂದಿರುಗಿದ ನಂತರ ಮಾರ್ಗದರ್ಶಿ ಶಿಕ್ಷಕರು ಫೋನ್ ಮೂಲಕ ಮಕ್ಕಳೊಂದಿಗೆ ಮಾತನಾಡಿ ಗೊಂದಲ / ಸಂಶಯಗಳನ್ನು ಬಗೆಹರಿಸಿ ಕಲಿಕೆಯನ್ನು ಖಚಿತಪಡಿಸಿಕೊಳ್ಳುವುದು.
- SMS ಗಳನ್ನು ಸಹ ಪರಿಣಾಮಕಾರಿಯಾಗಿ ಬಳಸುವುದು. ಪ್ರತೀ ಶಿಕ್ಷಕರು ಈ ಉದ್ದೇಶಕ್ಕಾಗಿ ವಾಟ್ಸಪ್‌ನಂತಹ ಆ್ಯಪ್‌ಗಳ ಮೂಲಕ ವಿದ್ಯಾರ್ಥಿಗಳ ಗುಂಪುಗಳನ್ನು ರಚಿಸಿ ನಿರಂತರ ಸಂಪರ್ಕದಲ್ಲಿರುವುದು.
- Voice Message ಅಥವಾ SMS ಗಳು ಪೋಷಕರು ಮತ್ತು ಮಕ್ಕಳು ಅದರಲ್ಲೂ ಪ್ರಾಥಮಿಕ ತರಗತಿ ಮಕ್ಕಳಿಗೆ ಹೆಚ್ಚು ಪರಿಣಾಮಕಾರಿಯಾಗುವುದರಿಂದ ಮಕ್ಕಳಿಗೆ ಅನುಕೂಲವಾಗುವಂತೆ ಸೂಕ್ತ Voice Message ಕಳುಹಿಸುವುದು.
- Voice Message ಗಳನ್ನು ಮಕ್ಕಳಿಗೆ ಭಾಷಾ ವಿಷಯಗಳ ಬೋಧನೆಯಲ್ಲಿ ಪಠನ ಮತ್ತು ಹಾಡುವಿಕೆಯ ಮೂಲಕ ಮಕ್ಕಳ ಗಮನವನ್ನು ಹೆಚ್ಚು ಸೆಳೆಯಬಹುದು.
- ಮುಂದುವರೆದು ಇಂಟರ್‌ನೆಟ್ ರಹಿತ ಮೊಬೈಲ್ ಫೋನ್ ಮೂಲಕ ಶಿಕ್ಷಕರು ಹಾಗೂ ಮಕ್ಕಳ ಮಧ್ಯೆ ಮುಖಾಮುಖಿ ಸಂವಾದ ಸಾಧ್ಯವಿಲ್ಲದೆ ಇರುವುದರಿಂದ ಮುಂದಿನ ಕಂಡಿಕೆಯಲ್ಲಿ 'ತರಗತಿ ವಿಧ–1' ವಿದ್ಯಾರ್ಥಿಗಳಿಗೆ ನಿರ್ದಿಷ್ಟಪಡಿಸಿರುವ ಎಲ್ಲಾ ಕ್ರಮಗಳನ್ನು ಮಾರ್ಗದರ್ಶಿ ಶಿಕ್ಷಕರು ಅನುಸರಿಸುವುದು.

❖ **ತರಗತಿ ವಿಧ–3 – ಇಂಟರ್‌ನೆಟ್ ಸಹಿತ ಕಂಪ್ಯೂಟರ್ / ಟ್ಯಾಬ್ / ಸ್ಮಾರ್ಟ್ ಫೋನ್ ಹೊಂದಿರುವ ತರಗತಿ :**

- ಮಾರ್ಗದರ್ಶಿ ಶಿಕ್ಷಕರು ಝೂಮ್ / ಸಿಸ್ಕೋ ವೆಬೆಕ್ಸ್ / ಗೂಗಲ್ ಕ್ಲಾಸ್ ರೂಮ್ ಮುಂತಾದ ಇಂಟರ್‌ನೆಟ್ ಅಪ್ಲಿಕೇಷನ್ (ಆ್ಯಪ್)ಗಳನ್ನು ಬಳಸಿ ವಿಡಿಯೋ ಕಾನ್ಫರೆನ್ಸ್ ಬೋಧನೆ ಮಾಡುವುದು.
- ತರಗತಿವಾರು ಕೈಗೊಳ್ಳಬಹುದಾದ ಬೋಧನಾ ಸಮಯವನ್ನು ಅನುಬಂಧ-1 ರಲ್ಲಿ ನೀಡಿರುವಂತೆ ಕ್ರಮವಹಿಸುವುದು.
- ಕೇವಲ ತಂತ್ರಜ್ಞಾನದ ಮೇಲೆ ಅವಲಂಬಿತರಾಗದೆ ತರಗತಿ ನಂತರ ಸ್ವಯಂ ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳಿಗೆ ಪ್ರಾಮುಖ್ಯತೆಯನ್ನು ನೀಡುವುದು.

❖ **ಮೂರೂ ಕೋಣೆಗಳ ಮಾರ್ಗದರ್ಶಿ ಶಿಕ್ಷಕರು ಕೇವಲ ತಂತ್ರಜ್ಞಾನಾಧಾರಿತ ಸಾಧನಗಳ ಮೇಲೆ ಅಥವಾ ಶಿಕ್ಷಕರ ಮೇಲೆ ಮಕ್ಕಳು ಅವಲಂಬಿತರಾಗದೆ ಸ್ವಯಂ ಕಲಿಕೆಗೆ ಪೂರಕವಾಗುವಂತಹ ಚಟುವಟಿಕೆಗಳಿಗೆ ಪ್ರಾಮುಖ್ಯತೆಯನ್ನು ನೀಡುವುದು. ಕೆಲವು ಸಲಹಾತ್ಮಕ ಕಾರ್ಯಕ್ರಮಗಳ ಪಟ್ಟಿ ಕೆಳಕಂಡಂತೆ ನೀಡಿದೆ. (ವಿವರಗಳನ್ನು ಅನುಬಂಧ- 2A, 2B ರಲ್ಲಿ ನೀಡಿದೆ.) :**

- ಅಭ್ಯಾಸ ಹಾಳೆಗಳನ್ನು ತಯಾರಿಸಿ ಮಕ್ಕಳಿಗೆ ನೀಡಿ ಉತ್ತರಿಸುವುದು. ಅವರ ಉತ್ತರವನ್ನು ಪಡೆದು ಹಿಮ್ಮಾಹಿತಿ ನೀಡುವುದು.
- ಸ್ಥಳೀಯ/ಮರುಬಳಕೆ/ಕಡಿಮೆ ವೆಚ್ಚದ ಸಾಮಗ್ರಿಗಳನ್ನು ಬಳಸಿ ಮಾಡಬಹುದಾದ ಚಟುವಟಿಕೆಗಳು
- ಮನೆಯಲ್ಲಿ ಮಕ್ಕಳು ಆಟಗಳ ಮೂಲಕ ಕಲಿಕೆಗೆ ಅನುಕೂಲಿಸುವುದು.
- ಮಗುವಿನಲ್ಲಿರುವ ಪ್ರತಿಭೆಯನ್ನು ಗುರುತಿಸಿ ಹವ್ಯಾಸವನ್ನು ರೂಢಿಸಿಕೊಂಡು ಕಲಿಯಲು ಪ್ರೋತ್ಸಾಹಿಸುವುದು.
- ಓದುವಿಕೆ, ಬರವಣಿಗೆ, ಹಾಡುವಿಕೆ ಮೂಲಕ ಮಕ್ಕಳ ಭಾಷಾ ಕೌಶಲ್ಯಗಳನ್ನು ವೃದ್ಧಿಸುವುದು.
- ಮನೆಯಲ್ಲಿಯೇ ಸುರಕ್ಷಿತವಾಗಿ ಮಾಡಬಹುದಾದ ವಿಜ್ಞಾನದ ಪ್ರಯೋಗಗಳನ್ನು ಮಾಡಲು ಬೆಂಬಲಿಸುವುದು.
- ವಿದ್ಯಾರ್ಥಿಗಳಿಂದ ಪಠ್ಯಕ್ಕೆ ಪೂರಕವಾದ ಆರ್ಥಿಕವಾಗಿ ಹೊರೆಯಾಗದ ಸರಳ ಪ್ರಾಜೆಕ್ಟ್‌ಗಳನ್ನು ಮಾಡಿಸುವುದು.

❖ **ಮುಖಾಮುಖಿ ಭೇಟಿ :**

- ಮೂರೂ ಕೋಣೆಯ ಮಾರ್ಗದರ್ಶಿ ಶಿಕ್ಷಕರು 'ನೆರೆಹೊರೆ' ಗುಂಪುವಾರು ಮಕ್ಕಳನ್ನು ವಾರಕ್ಕೆ ಸಾಧ್ಯವಾದಷ್ಟು ಬಾರಿ ಕನಿಷ್ಠ ವಾರಕ್ಕೆ ಒಂದು ಬಾರಿಯಾದರೂ ಭೇಟಿ ಮಾಡಿ ಮಕ್ಕಳ ಕಲಿಕಾ ಪ್ರಗತಿ ಹಾಗೂ ಪಠ್ಯೇತರ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು.
- ಸದರಿ ಭೇಟಿಗಳನ್ನು ಸಮುದಾಯ ಭವನ / ಧಾರ್ಮಿಕ ಸ್ಥಳ / ಸೂಕ್ತ ಮರದ ನೆರಳಿನಲ್ಲಿ ದೈಹಿಕ ಅಂತರವನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ನಡೆಸುವುದು.
- ಶಾಲೆಯಲ್ಲಿನ ದೈಹಿಕ ಶಿಕ್ಷಕರು, ವೃತ್ತಿ ಶಿಕ್ಷಕರು ಹಾಗೂ ಇತರೆ ಶಿಕ್ಷಕರನ್ನು ಸಹ ಈ ಕಾರ್ಯದಲ್ಲಿ ತೊಡಗಿಸಿಕೊಂಡು ಅವರ ಮುಖಾಂತರ ಮಕ್ಕಳಿಗೆ ವಿದ್ವತ್ಪೂರ್ಣ (Scholastic) ಚಟುವಟಿಕೆಗಳೊಂದಿಗೆ ಪಠ್ಯೇತರ ಚಟುವಟಿಕೆಗಳನ್ನು ಸಹ ಆಯೋಜಿಸುವಂತೆ ಕ್ರಮ ವಹಿಸುವುದು.

- ಮಕ್ಕಳಲ್ಲಿರುವ ಸಂದೇಹ / ಸಂಶಯ / ಗೊಂದಲಗಳನ್ನು ಬಗೆಹರಿಸುವುದು.
- ಯಾವುದಾದರೂ ಮನೆಯಲ್ಲಿ ಮಕ್ಕಳಿಗೆ ಕಲಿಕೆಗೆ ಪೂರಕವಾದ ವಾತಾವರಣ ಇಲ್ಲದೆ ಇದ್ದಲ್ಲಿ ಅಥವಾ ಪೋಷಕರ ಸಹಕಾರದ ಕೊರತೆ ಕಂಡುಬಂದಲ್ಲಿ ಪೋಷಕರನ್ನು ಭೇಟಿ ಮಾಡಿ ಮನವೊಲಿಸುವುದು.
- ನೆರೆಹೊರೆ ಗುಂಪಿಗೆ ಗುರುತಿಸಿರುವ ಸ್ವಯಂಸೇವಕರು / ಎಸ್.ಡಿ.ಎಮ್.ಸಿ ಸದಸ್ಯರೊಂದಿಗೆ ಸಂವಾದ ನಡೆಸಿ ಈ ಕಾರ್ಯಕ್ರಮದಲ್ಲಿ ಇನ್ನೂ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹಿಸುವುದು.
- ಮಕ್ಕಳಿಗೆ ಅಭ್ಯಾಸದ ಹಾಳೆಗಳನ್ನು ಹಾಗೂ ಮುಂದಿನ ವಾರದ ವೇಳಾಪಟ್ಟಿಯನ್ನು ನೀಡಿ, ಈ ಹಿಂದೆ ನೀಡಿರುವ ಅಭ್ಯಾಸದ ಹಾಳೆಗಳನ್ನು ಪಡೆದು ಮೌಲ್ಯಮಾಪನ ಮಾಡುವುದು ಅಥವಾ ಸಂಬಂಧಿಸಿದ ವಿಷಯ ಶಿಕ್ಷಕರಿಗೆ ತಲುಪಿಸಿ ಮೌಲ್ಯಮಾಪನ ಮಾಡಿಸುವುದು.
- ಹಿಂದಿನ ಮೌಲ್ಯಮಾಪನದಲ್ಲಿ ಕಂಡುಬಂದ ಕಲಿಕಾ ಕೊರತೆಗಳನ್ನು ತಿಳಿಸುವುದು ಹಾಗೂ ಪರಿಹಾರ ಮಾರ್ಗಗಳನ್ನು ಸೂಚಿಸುವುದು.
- ಮಾರ್ಗದರ್ಶಿ ಶಿಕ್ಷಕರು ಮಕ್ಕಳಿಗೆ ಸಮಾಲೋಚನೆ ಮೂಲಕ ಮಕ್ಕಳ ಮನೋಸ್ಥೈರ್ಯವನ್ನು ವೃದ್ಧಿಸುವುದು.
- ಮಾರ್ಗದರ್ಶಿ ಶಿಕ್ಷಕರು / ಎಸ್.ಡಿ.ಎಮ್.ಸಿ ಸದಸ್ಯರು / ಸ್ವಯಂ ಸೇವಕರು ನೆರೆಹೊರೆ ಗುಂಪಿನಲ್ಲಿರುವ ಎಲ್ಲಾ ಮಕ್ಕಳನ್ನೂ ಒಟ್ಟಿಗೆ ಭೇಟಿ ಮಾಡುವುದು ಅಥವಾ ಪೋಷಕರ / ಪಾಲಕರ ಸಮ್ಮುಖದಲ್ಲಿ ಮಕ್ಕಳನ್ನು ಭೇಟಿ ಮಾಡುವುದು. ಆದರೆ ಯಾವುದೇ ಕಾರಣಕ್ಕೂ ಮಗು ಮನೆಯಲ್ಲಿ ಒಂಟಿಯಾಗಿರುವಾಗ ಭೇಟಿ ಮಾಡುವಂತಿಲ್ಲ.
- ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯು ಆತ್ಮನಿರ್ಭರ್ ಅಭಿಯಾನ ಅಡಿಯಲ್ಲಿ "ಮನೋದರ್ಪನ್" ಕಾರ್ಯಕ್ರಮದ ಮೂಲಕ ಪ್ರಸ್ತುತ ಕೋವಿಡ್-19 ಸೋಂಕು ಅವಧಿ ಹಾಗೂ ತದನಂತರ ಸಂದರ್ಭಗಳಲ್ಲಿ ಶಾಲಾ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಮಾನಸಿಕ ಸ್ಥೈರ್ಯ, ಯೋಗಕ್ಷೇಮದ ಸ್ಥಿರತೆ ಹಾಗೂ ಆರೋಗ್ಯ ಉತ್ತಮಪಡಿಸುವ ಬಗ್ಗೆ ದಿನಾಂಕ : 21-07-2020 ರಂದು ಅಂತರ್ಜಾಲ ಮೂಲಕ ವೆಬ್‌ಸೈಟ್ ಪ್ರಾರಂಭಿಸಲಾಗಿದೆ. ಸದರಿ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಉಪಯೋಗಕ್ಕಾಗಿ Psychological support, adolescent stress, family togetherness, role of the teacher and learning life skills ವಿಷಯಗಳನ್ನೊಳಗೊಂಡಂತೆ ಒಟ್ಟು 7 ಪುಟಗಳ ಮಾಹಿತಿಯನ್ನು ಅಳವಡಿಸಲಾಗಿದೆ. ಇಲಾಖಾ ಅಧಿಕಾರಿಗಳು, ಶಿಕ್ಷಕರು, ಪೋಷಕರು ಹಾಗೂ ಮಕ್ಕಳು "ಮನೋದರ್ಪಣ್" ವೆಬ್‌ಪೇಜ್‌ನ್ನು manodarpan.mhrd.gov.in ಮೂಲಕ ವೀಕ್ಷಿಸಬಹುದಾಗಿದೆ ಅಥವಾ ಸಹಾಯವಾಣಿ – 8448440632 ಮೂಲಕ ಅಗತ್ಯ ಸಂದರ್ಭದಲ್ಲಿ ಸಹಾಯ ಪಡೆಯಬಹುದಾಗಿದೆ.

❖ **ಬೋಧನಾ ಪ್ರಕ್ರಿಯೆ :**

- 1 ರಿಂದ 5ನೇ ತರಗತಿಯ ಮಕ್ಕಳಿಗೆ ಮಾರ್ಗದರ್ಶಿ ಶಿಕ್ಷಕರೇ ಎಲ್ಲಾ ವಿಷಯಗಳನ್ನು ನಿರ್ವಹಿಸುವುದು.

- 6 ರಿಂದ 10ನೇ ತರಗತಿ ಮಕ್ಕಳಿಗೆ ಮಾರ್ಗದರ್ಶಿ ಶಿಕ್ಷಕರು ತಮ್ಮ ವಿಷಯವನ್ನು ನಿರ್ವಹಿಸುವುದು. ಇತರೆ ವಿಷಯಗಳನ್ನು ಬೋಧಿಸಲು ವಿಷಯ ಶಿಕ್ಷಕರೊಂದಿಗೆ ಸಮನ್ವಯ ಸಾಧಿಸುವುದು.
- 6 ರಿಂದ 10ನೇ ತರಗತಿ ಮಕ್ಕಳಿಗೆ ಅಯಾ ವಿಷಯ ಶಿಕ್ಷಕರು ಕಲಿಕಾ ಯೋಜನೆ, ಕಲಿಕಾ ಸಾಮಗ್ರಿ ಮತ್ತು ಮೌಲ್ಯಮಾಪನ ಸಾಮಗ್ರಿ ತಯಾರಿಸಿ ಮಾರ್ಗದರ್ಶಿ ಶಿಕ್ಷಕರಿಗೆ ನೀಡುವುದು.
- ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆ ಮಾಡಿರುವ ಎಲ್ಲಾ ವಿದ್ಯಾರ್ಥಿಗಳ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಅಭ್ಯಾಸ ಹಾಳೆಗಳನ್ನು, ರೂಪಣಾತ್ಮಕ ಪ್ರಶ್ನೆ ಪತ್ರಿಕೆಗಳನ್ನು ಮಕ್ಕಳಿಗೆ ತಲುಪಿಸುವುದು ಉತ್ತರ ಪತ್ರಿಕೆಗಳನ್ನು ಮಕ್ಕಳಿಂದ ಹಿಂಪಡೆದು ಸಂಬಂಧಿಸಿದ ವಿಷಯ ಶಿಕ್ಷಕರ ಮೂಲಕ ಮೌಲ್ಯಮಾಪನ ಮಾಡಿಸಿ ಪರಿಹಾರ ಬೋಧನೆ ಕ್ರಮ ಕೈಗೊಳ್ಳುವುದು.
- ಅಭ್ಯಾಸ ಹಾಳೆಗಳನ್ನು ವಿಷಯ ಶಿಕ್ಷಕರು ಸಿದ್ಧಪಡಿಸಬಹುದಾಗಿರುತ್ತದೆ. ಹೆಚ್ಚುವರಿಯಾಗಿ ಅಗತ್ಯವಿರುವ ಅಭ್ಯಾಸ ಹಾಳೆಗಳನ್ನು ಡಿ.ಎಸ್.ಇ.ಆರ್.ಟಿ ಅಂತರ್ಜಾಲ ತಾಣದಿಂದ ಡೌನ್‌ಲೋಡ್ ಮಾಡಿಕೊಂಡು ಬಳಸಿಕೊಳ್ಳುವುದು.

❖ **ನಿರಂತರ ವ್ಯಾಪಕ ಮೌಲ್ಯಮಾಪನ :**

- ಕೋವಿಡ್ ಹಿನ್ನಲೆಯಲ್ಲಿ ಗಣನೀಯ ಅವಧಿಗೆ ಭೌತಿಕ ಶಾಲೆಗಳನ್ನು ನಡೆಸಲು ಸಾಧ್ಯವಾಗದೆ ಇದ್ದಲ್ಲಿ ಪ್ರಸ್ತುತ ಸಾಲಿಗೆ ಸಂಕಲನಾತ್ಮಕ ಮೌಲ್ಯಮಾಪನವನ್ನು ಕೈಬಿಡಲಾಗುವುದು.
- ರೂಪಣಾತ್ಮಕ ಮೌಲ್ಯಮಾಪನ 1, 2, 3 ಮತ್ತು 4ನ್ನು ಭೌತಿಕವಾಗಿ ಶಾಲೆಗಳನ್ನು ನಡೆಸಲು ಸಾಧ್ಯವಾಗದೆ ಇದ್ದಲ್ಲಿಯೂ ಸಹ ಮಾರ್ಗದರ್ಶಿ ಶಿಕ್ಷಕರ ಹಂತದಲ್ಲಿ ತಪ್ಪದೆ ಕೈಗೊಳ್ಳುವುದು.
- ರೂಪಣಾತ್ಮಕ ಮೌಲ್ಯಮಾಪನಗಳನ್ನು ಎಲ್ಲಾ ಕೋಣೆಗಳಲ್ಲಿ ನಿಗದಿತ ದಿನಾಂಕದಂದು ನಡೆಸುವ ಬದಲಾಗಿ ನಿಗದಿಪಡಿಸಿದ ಪಠ್ಯಕ್ರಮ ಪೂರ್ಣಗೊಂಡ ನಂತರ ಹಾಗೂ ಮಕ್ಕಳ ಕಲಿಕೆಯ ಆಧಾರದ ಮೇಲೆ ಮಾರ್ಗದರ್ಶಿ ಶಿಕ್ಷಕರು ಸಂದರ್ಭೋಚಿತವಾಗಿ ನಡೆಸುವುದು. ಇದಕ್ಕೆ ಅನುಗುಣವಾಗಿ ಪ್ರತ್ಯೇಕ ಮಾರ್ಗಸೂಚಿಯನ್ನು ನೀಡಲಾಗುವುದು.
- ಮಾರ್ಗದರ್ಶಿ ಶಿಕ್ಷಕರು ರೂಪಣಾತ್ಮಕ ಮೌಲ್ಯಮಾಪನದ ಫಲಿತಾಂಶವನ್ನು ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.
- ಎಸ್.ಎಸ್.ಎಲ್.ಸಿ ಮಕ್ಕಳನ್ನು ಹೊರತುಪಡಿಸಿ ಬೇರೆ ಎಲ್ಲಾ ಮಕ್ಕಳನ್ನು ರೂಪಣಾತ್ಮಕ ಮೌಲ್ಯಮಾಪನ ಆಧರಿಸಿ ಶ್ರೇಣಿಗಳನ್ನು ನಿರ್ಧರಿಸಲಾಗುವುದು ಹಾಗೂ ಮುಂದಿನ ತರಗತಿಗೆ ತೇರ್ಗಡೆ ಮಾಡಲಾಗುವುದು.
- ಪ್ರತಿ ಮಗು 'ವಿದ್ಯಾಗಮ'ದಲ್ಲಿ ನಿರ್ವಹಿಸಿದ ಎಲ್ಲಾ ಚಟುವಟಿಕೆಗಳ ದಾಖಲೆಗಳನ್ನು ಕೃತಿ ಸಂಪುಟ (ಚೈಲ್ಡ್ ಪೋರ್ಟ್‌ಫೋಲಿಯೋ)ದಲ್ಲಿ ದಾಖಲಿಸುವುದು.

❖ **ವಲಸೆ ಮಕ್ಕಳು :**

- ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆ ಮಾಡಿರುವ ಮಕ್ಕಳಲ್ಲಿ ಯಾರಾದರೂ ವಲಸೆ ಹೋಗಿದ್ದಲ್ಲಿ ಅಂತಹ ಮಕ್ಕಳ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಹಿರಿಯ ಅಧಿಕಾರಿಗಳ ಮೂಲಕ ಮಗು ವಲಸೆ ಹೋಗಿರುವ ಸ್ಥಳದಲ್ಲಿನ ಮಾರ್ಗದರ್ಶಿ ಶಿಕ್ಷಕರಿಗೆ ತಲುಪಿಸುವುದು.

- ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆ ಮಾಡಿರುವ ಕಾಲ್ಪನಿಕ ಕಲಿಕಾ ಕೋಣೆಯ ವ್ಯಾಪ್ತಿಯಲ್ಲಿ ಯಾವುದಾದರೂ ಮಗು ವಲಸೆ ಬಂದಿದ್ದಲ್ಲಿ ಯಾವುದೇ ದಾಖಲಾತಿಗಳನ್ನು ನಿರೀಕ್ಷಿಸದೆ ಕೇವಲ ಪೋಷಕರ ಹೇಳಿಕೆ ಮೇರೆಗೆ ಮಗುವನ್ನು ಸೂಕ್ತ ತರಗತಿಗೆ ದಾಖಲಾತಿ ಮಾಡಿಕೊಳ್ಳುವುದು.
- ವಲಸೆ ಬಂದ ಮಕ್ಕಳಿಗೆ ಪಠ್ಯಪುಸ್ತಕ, ಕಲಿಕಾ ಸಾಮಗ್ರಿಗಳು ಹಾಗೂ ಮಧ್ಯಾಹ್ನದ ಉಪಹಾರ ಯೋಜನೆಯ ಆಹಾರ ಧಾನ್ಯಗಳನ್ನು ಕಡ್ಡಾಯವಾಗಿ ವಿತರಿಸುವುದು.
- ವಲಸೆ ಬಂದ ಮಕ್ಕಳ ಕಲಿಕಾ ಮಟ್ಟವನ್ನು ಮೌಲ್ಯಮಾಪನ ಮಾಡಿ ಕಲಿಕಾ ಕೊರತೆಗಳನ್ನು ಗುರುತಿಸಿ ಸೂಕ್ತ ಪರಿಹಾರ ಬೋಧನೆಯನ್ನು ಕೈಗೊಳ್ಳುವುದು.

❖ **ವಿಶೇಷ ಅಗತ್ಯತೆಯುಳ್ಳ ಮಕ್ಕಳು :**

- ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಮೇಲೆ ತಿಳಿಸಿರುವ ಎಲ್ಲಾ ಸೌಲಭ್ಯಗಳೊಂದಿಗೆ ಕೆಳಗಿನ ಹೆಚ್ಚುವರಿ ಸೌಲಭ್ಯಗಳನ್ನು ಮಾರ್ಗದರ್ಶಿ ಶಿಕ್ಷಕರು ಬಿ.ಐ.ಇ.ಆರ್.ಟಿ ಶಿಕ್ಷಕರೊಂದಿಗೆ ಸಮನ್ವಯ ಸಾಧಿಸಿ ದೊರಕುವಂತೆ ಕ್ರಮವಹಿಸುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳ ನ್ಯೂನ್ಯತೆವಾರು ಪ್ರತ್ಯೇಕ ಪಟ್ಟಿಯನ್ನು ಮಾಡಿಕೊಳ್ಳುವುದು.
- ಶ್ರವಣ ದೋಷವುಳ್ಳ ಮಕ್ಕಳಿಗೆ NIOS sign language TV channel ವೀಕ್ಷಿಸಲು ಮಾರ್ಗದರ್ಶನ ನೀಡುವುದು.
- ವಿಶೇಷ ಅಗತ್ಯತೆಯುಳ್ಳ ಮಕ್ಕಳ ಮನೆಗೆ ಖುದ್ದು ಭೇಟಿ ನೀಡಿ ಅವರ ಕಲಿಕಾ ಪ್ರಗತಿಯನ್ನು ಪರಿಶೀಲಿಸುವುದು ಮತ್ತು ಅಗತ್ಯ ಮಾರ್ಗದರ್ಶನವನ್ನು ನೀಡುವುದು.
- Block Inclusive Education Resource Teachers (ಬಿ.ಐ.ಇ.ಆರ್.ಟಿ) ಶಿಕ್ಷಕರ ಸೇವೆಯನ್ನು ಪಡೆದು ಈ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ನೀಡುವುದರೊಂದಿಗೆ ಈ ಮಕ್ಕಳು ಕಾಲ್ಪನಿಕ ಕಲಿಕಾ ಕೋಣೆಯಲ್ಲಿ ಇತರೆ ಮಕ್ಕಳೊಂದಿಗೆ ಬೆರೆತು ಕಲಿಯಲು ಅವಕಾಶ ನೀಡುವುದು.
- ಈ ಮಕ್ಕಳಿಗೆ ಕಲಿಕೆಗೆ ಪೂರಕವಾಗುವಂತಹ ಅಭ್ಯಾಸ ಹಾಳೆಗಳು ಹಾಗೂ ವಿಶೇಷ ಚಟುವಟಿಕೆಗಳನ್ನು ರೂಪಿಸಿ ಮಕ್ಕಳ ಬಳಕೆಗೆ ನೀಡುವುದು.

ಕೋವಿಡ್ ಮಹಾಮಾರಿ ಹಿನ್ನಲೆಯಲ್ಲಿ ಬಹುತೇಕ ಮಕ್ಕಳು ಕಲಿಕೆಯಿಂದ ವಂಚಿತರಾಗಿ ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಅಭದ್ರರಾಗಿರುತ್ತಾರೆ. ಇಂತಹ ಸಂದರ್ಭದಲ್ಲಿ ಮಕ್ಕಳೊಂದಿಗೆ ನಿಂತು ಮಕ್ಕಳಲ್ಲಿ ಮನೋಸ್ಥೈರ್ಯವನ್ನು ಹೆಚ್ಚಿಸಿ ನಿರಂತರ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವುದು

ಶಿಕ್ಷಣ ಇಲಾಖೆಯ ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರು ಸ್ವಯಂ ಪ್ರೇರಿತರಾಗಿ ಮಾರ್ಗದರ್ಶಕರಾಗಿ ರೂಪಾಂತರಗೊಂಡು ಮೇಲೆ ಪ್ರಸ್ತಾಪಿಸಿರುವ ವಿಧಾನವನ್ನು ಒಳಗೊಂಡಂತೆ ಸ್ಥಳೀಯ ಅವಶ್ಯಕತೆಗನುಗುಣವಾಗಿ ನಾವಿನ್ಯ ಯೋಜನೆಗಳನ್ನು ರೂಪಿಸಿಕೊಂಡು ಪ್ರತಿ ಮಗುವಿನ ಮುಂದಿನ ಭವಿಷ್ಯದ ರೂವಾರಿಗಳಾಗಿ ಜವಾಬ್ದಾರಿ ನಿಭಾಯಿಸುತ್ತಾರೆಂದು 'ವಿದ್ಯಾಗಮ' ಆಶಿಸುತ್ತದೆ.

**ಮಾರ್ಗದರ್ಶಿ ಶಿಕ್ಷಕರು ತಮ್ಮ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಇಲಾಖೆಯ ವಿವಿಧ ಅಧಿಕಾರಿಗಳ ಜವಾಬ್ದಾರಿಗಳು :**

❖ **ಶಾಲಾ ಮುಖ್ಯೋಪಾಧ್ಯಾಯರ ಜವಾಬ್ದಾರಿಗಳು :**

- ತಮ್ಮ ಶಾಲೆಯ ಎಲ್ಲಾ ಶಿಕ್ಷಕರಿಗೆ 2020-21ನೇ ಶೈಕ್ಷಣಿಕ ಸಾಲಿಗೆ ವಹಿಸಿದ ತರಗತಿ ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ವಿಷಯವಾರು "ನಿರಂತರ ಕಲಿಕಾ ಯೋಜನೆ" [continuous learning plan] ತಯಾರಿಸಲು ತಿಳಿಸುವುದು. ಈ ಬಗ್ಗೆ ಎಲ್ಲಾ ತರಗತಿಗಳ, ಎಲ್ಲಾ ವಿಷಯಗಳ ಹಂಚಿಕೆಯಾಗಿರುವುದನ್ನು ಖಚಿತ ಪಡಿಸಿಕೊಳ್ಳುವುದು.
- ಇಲಾಖೆಯಿಂದ ಒದಗಿಸಿರುವ ಪಠ್ಯಪುಸ್ತಕಗಳು ಪ್ರತಿಯೊಬ್ಬ ಮಗುವಿಗೆ ಮಾರ್ಗದರ್ಶಿ ಶಿಕ್ಷಕರ ಮೂಲಕ ನಿಗದಿತ ಸಮಯದೊಳಗೆ ತಲುಪುವಂತೆ ನೋಡಿಕೊಳ್ಳುವುದು.
- ಆಯಾ ಮಾಹೆಯ ಸಂಪೂರ್ಣವಾದ ಮಧ್ಯಾಹ್ನ ಉಪಹಾರ ಧಾನ್ಯಗಳನ್ನು ಪೋಷಕರನ್ನು ಶಾಲೆಗೆ ಬರಮಾಡಿಕೊಂಡು ವಿತರಣೆ ಮಾಡುವುದು.
- 'ವಿದ್ಯಾಗಮ'ದಡಿಯಲ್ಲಿ ಮಾರ್ಗದರ್ಶಿ ಶಿಕ್ಷಕರ ಬೇಡಿಕೆಯಂತೆ ಅಗತ್ಯವಿರುವಷ್ಟು ಅಭ್ಯಾಸ ಹಾಳೆಗಳನ್ನು ಮತ್ತು ಕಲಿಕಾ ಸಾಮಗ್ರಿಗಳ ಪ್ರತಿಗಳನ್ನು ಮಾಡಿಸಲು ತಗಲುವ ವೆಚ್ಚವನ್ನು ಶಾಲಾನುದಾನ / ಶಾಲಾ ಸಂಚಿತ ನಿಧಿಯಿಂದ ಭರಿಸುವುದು.
- ಶಾಲೆಯಲ್ಲಿನ ಎಲ್ಲಾ ಶಿಕ್ಷಕರಿಗೆ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ನೆರೆಹೊರೆ ತಂಡಗಳನ್ನು ಗುರುತಿಸಿ ಅದಕ್ಕೆ ಅನುಗುಣವಾಗಿ ಮಾರ್ಗದರ್ಶಿ ಶಿಕ್ಷಕರನ್ನು ನೇಮಿಸುವುದು.
- ಪ್ರತಿ ಮಾರ್ಗದರ್ಶಿ ಶಿಕ್ಷಕರು ಮೇಲೆ ತಿಳಿಸಿರುವ ಮೂರು ಕಾಲ್ಪನಿಕ ಕಲಿಕಾ ಕೋಣೆಗಳಲ್ಲಿ ಅನ್ವಯವಾಗುವ ಕೋಣೆಯನ್ನು / ಕೋಣೆಗಳನ್ನು ರೂಪಿಸಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಸವಾಲಿನ ಇಂತಹ ಸಂದರ್ಭದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿದ್ಯಾಗಮವನ್ನು ಉತ್ತಮ ರೀತಿಯಲ್ಲಿ ಅನುಷ್ಠಾನಗೊಳಿಸಲು ಮಾರ್ಗದರ್ಶಿ ಶಿಕ್ಷಕರಿಗೆ ಆಗಿಂದ್ದಾಗ್ಗೆ ಪ್ರೇರೇಪಣೆ ಮತ್ತು ಮಾರ್ಗದರ್ಶನ ಮಾಡುವುದು.
- ಇಲಾಖೆಯಿಂದ ಒದಗಿಸಿರುವ ಪಠ್ಯಕ್ರಮದಂತೆ ವಿಷಯ ಹಂಚಿಕೆ ಮಾಡಿ ವೇಳಾಪಟ್ಟಿಯನ್ನು ಸಿದ್ದಪಡಿಸುವುದು ಹಾಗೂ ವಿಷಯ ಶಿಕ್ಷಕರ ಸಮನ್ವಯ ಸಾಧನೆಗೆ ಸೂಕ್ತ ವೇದಿಕೆಯನ್ನು ನಿರ್ಮಿಸುವುದು.
- ಮಾರ್ಗದರ್ಶಿ ಶಿಕ್ಷಕರ ಮೂಲಕ ನಿಗದಿಪಡಿಸಿದ ಭೌಗೋಳಿಕ ಪ್ರದೇಶದಲ್ಲಿ ನಡೆಸಲಾಗುವ ಸಮೀಕ್ಷೆಯಲ್ಲಿ ಕಂಡುಬರುವಂತಹ ವಲಸೆ ಬಂದ ಮಕ್ಕಳ ಮತ್ತು ದಾಖಲಾಗದೇ ಉಳಿದಿರುವ ಮಕ್ಕಳ ವಿವರಗಳನ್ವಯ ದಾಖಲಾತಿಗೆ ಪ್ರಕ್ರಿಯೆಯನ್ನು ನಿರ್ವಹಿಸುವುದು.
- ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆ ಮಾಡಿರುವ ಮಕ್ಕಳಲ್ಲಿ ಯಾರಾದರೂ ವಲಸೆ ಹೋಗಿದ್ದಲ್ಲಿ ಅಂತಹ ಮಕ್ಕಳ ಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ಹಿರಿಯ ಅಧಿಕಾರಿಗಳ ಮೂಲಕ ಮಗು ವಲಸೆ ಹೋಗಿರುವ ಸ್ಥಳದಲ್ಲಿನ ಮಾರ್ಗದರ್ಶಿ ಶಿಕ್ಷಕರಿಗೆ ತಲುಪಿಸುವುದು.
- ಇಲಾಖೆಯಿಂದ ಹೊರಡಿಸುವ ಸೂಚನೆಯನ್ನು ಆಧರಿಸಿ ದಾಖಲಾತಿ ಹಾಗೂ ರೂಪಣಾತ್ಮಕ ಮೌಲ್ಯಮಾಪನಗಳ ಶ್ರೇಣಿಗಳನ್ನು ಸ್ಯಾಟ್ಸ್‌ನಲ್ಲಿ ಇಂದೀಕರಿಸುವುದು.

- ಕಾಲ್ಪನಿಕ ಕಲಿಕಾ ಕೋಣೆಗಳ ಅಗತ್ಯಕ್ಕೆ ತಕ್ಕಂತೆ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಮಾನವ ಸಂಪನ್ಮೂಲ, ಸೇವೆ ಮತ್ತು ಸಾಮಗ್ರಿಗಳನ್ನು ಒಳಗೊಂಡ ಸಂಪನ್ಮೂಲಗಳನ್ನು ಸಮುದಾಯದ ಸಹಕಾರದಿಂದ ಪಡೆದುಕೊಳ್ಳುವುದು.
- ಮಾರ್ಗದರ್ಶಿ ಶಿಕ್ಷಕರು ನಿರ್ವಹಿಸಿರುವ ಪ್ರತಿ ಮಗುವಿನ ಕೃತಿ ಸಂಪುಟ (ಚೈಲ್ಡ್ ಪೋರ್ಟ್‌ಫೋಲಿಯೋ) ಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನವನ್ನು ನೀಡುವುದು ಹಾಗೂ ಇವುಗಳನ್ನು ಸಂಗ್ರಹಿಸಿ ದಾಖಲೀಕರಣ ಮಾಡುವುದು.
- ಲಭ್ಯವಿರುವ ಶಾಲಾನುದಾನ, ನಿರ್ವಹಣಾ ವೆಚ್ಚ ಮತ್ತು ಸಂಚಿತ ನಿಧಿಗಳನ್ನು ಬಳಸುವುದರೊಂದಿಗೆ ಸಮುದಾಯದಿಂದ ಅನುದಾನವನ್ನು ಸಂಗ್ರಹಿಸಿ ಅಗತ್ಯತೆಗಳಿಗೆ ಅನುಗುಣವಾಗಿ ಎಸ್.ಡಿ.ಎಮ್.ಸಿ ಅನುಮೋದನೆಯೊಂದಿಗೆ ಬಳಕೆ ಮಾಡುವುದು. ಪೋಷಕರಿಗೆ ಆರ್ಥಿಕವಾಗಿ ಹೊರೆಯಾಗದಂತೆ ಕ್ರಮಗಳನ್ನು ಕೈಗೊಳ್ಳುವುದು.
- ವಾರಕ್ಕೊಮ್ಮೆ ಮಾರ್ಗದರ್ಶಿ ಶಿಕ್ಷಕರೊಂದಿಗೆ ಸಮನ್ವಯ ಸಭೆಯನ್ನು ನಡೆಸಿ 'ವಿದ್ಯಾಗಮ' ಕಾರ್ಯಕ್ರಮದ ಪ್ರಗತಿ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ತಲುಪಿಸುವುದು.

### ❖ ಗ್ರಾಮ ಪಂಚಾಯಿತಿ ಹಾಗೂ ಶಾಲಾ ಮೇಲುಸ್ತುವಾರಿ ಸಮಿತಿಗಳ ಜವಾಬ್ದಾರಿ :

- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 6 ರಿಂದ 14 ವಯಸ್ಸಿನ ಎಲ್ಲಾ ಮಕ್ಕಳು ವಿದ್ಯಾಗಮ ಕಾರ್ಯಕ್ರಮದಡಿ ದಾಖಲಾಗಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
- ಕಲಿಕೆಗೆ ಪೂರಕವಾದ ವಾತಾವರಣವನ್ನು ಪ್ರತೀ ವಠಾರ / ನೆರೆಹೊರೆಯಲ್ಲಿ ಸೃಷ್ಟಿಸುವುದು.
- ವಿದ್ಯಾವಂತ ಯುವಕರನ್ನು ಸ್ವಯಂ ಸೇವಕರನ್ನಾಗಿ ಪ್ರತೀ ವಠಾರ / ನೆರೆಹೊರೆಗೆ ನೇಮಿಸಲು ಸಹಕರಿಸುವುದು.
- ಪ್ರತೀ ಮಗುವಿಗೆ ಮಧ್ಯಾಹ್ನದ ಉಪಹಾರ ಯೋಜನೆಯಡಿ ಆಹಾರ ಧಾನ್ಯ ವಿತರಣೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಯಾವುದೇ ಮಗು ಬಾಲ್ಯ ಕಾರ್ಮಿಕ / ಬಾಲ್ಯ ವಿವಾಹ ಮುಂತಾದ ಪಿಡುಗುಗಳಿಗೆ ಒಳಗಾಗದಂತೆ ಕ್ರಮ ವಹಿಸುವುದು.

### ❖ ಸಿ.ಆರ್.ಪಿ / ಇ.ಸಿ.ಓ / ಬಿ.ಆರ್.ಪಿ / ಬಿ.ಆರ್.ಸಿ ಗಳ ಜವಾಬ್ದಾರಿಗಳು :

- ಸಿ.ಆರ್.ಪಿ / ಇ.ಸಿ.ಓ / ಬಿ.ಆರ್.ಪಿ / ಬಿ.ಆರ್.ಸಿ ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಲ್ಪನಿಕ ಕಲಿಕಾ ಕೋಣೆಗಳಲ್ಲಿನ ಮಾರ್ಗದರ್ಶಿ ಶಿಕ್ಷಕರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದು ಅಗತ್ಯವಿದ್ದಾಗಲೆಲ್ಲ ಭೇಟಿಯನ್ನು ನೀಡಿ ಬೆಂಬಲವನ್ನು ನೀಡುವುದು.
- ಶಾಲಾ ಮುಖೋಪಾಧ್ಯಾಯರು ನಡೆಸುವ ಸಮನ್ವಯ ಸಭೆಯಲ್ಲಿ ಸಂಬಂಧಿಸಿದ ಸಿ.ಆರ್.ಪಿ / ಬಿ.ಆರ್.ಪಿ / ಇ.ಸಿ.ಓ ರವರು ತಪ್ಪದೆ ಹಾಜರಾಗಿ ಸಲಹೆ ಸೂಚನೆಗಳನ್ನು ನೀಡಿ ತಮ್ಮ ಹಂತದಲ್ಲಿ ಬಗೆಹರಿಸಲು ಸಾಧ್ಯವಾಗದ ಸಮಸ್ಯೆಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸಮನ್ವಯವನ್ನು ಸಾಧಿಸುವುದು.
- ಪಠ್ಯಪುಸ್ತಕ ವಿತರಣೆಗೆ, ಮಧ್ಯಾಹ್ನದ ಉಪಹಾರ ಹಾಗೂ ಇತರೆ ಸಾಮಗ್ರಿಗಳು ಸರಿಯಾದ ಸಮಯದಲ್ಲಿ ಶಾಲೆಗಳಿಗೆ ತಲುಪಿಸುವುದು ಹಾಗೂ ಸಂಬಂಧಿಸಿದ ಶಾಲೆ ಮತ್ತು ಮಾರ್ಗದರ್ಶಿ ಶಿಕ್ಷಕರ ಮೂಲಕ ಎಲ್ಲಾ ಮಕ್ಕಳಿಗೆ ಸಕಾಲದಲ್ಲಿ ತಲುಪಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.

- ➢ ಮಾರ್ಗದರ್ಶಿ ಮತ್ತು ವಿಷಯ ಶಿಕ್ಷಕರಿಗೆ ಅಗತ್ಯವಿರುವ ಶೈಕ್ಷಣಿಕ ಬೆಂಬಲವನ್ನು ನೀಡುವುದು ಹಾಗು ಒಂದು ಕಾಲ್ಪನಿಕ ಕಲಿಕಾ ಕೋಣೆಯಲ್ಲಿನ ಯಶೋಗಾಥೆಯನ್ನು ಇತರೆ ಮಾರ್ಗದರ್ಶಿ ಶಿಕ್ಷಕರೊಂದಿಗೆ ಹಂಚಿಕೊಳ್ಳುವುದು.
- ➢ ಪ್ರತಿ ವಾರಕ್ಕೊಮ್ಮೆ ತಮ್ಮ ಕ್ಷೇತ್ರದಲ್ಲಿನ 'ವಿದ್ಯಾಗಮ' ಕಾರ್ಯಕ್ರಮದ ಪ್ರಗತಿ ವರದಿಯನ್ನು ತಮ್ಮ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.
- ➢ ಮಾರ್ಗದರ್ಶಿ ಶಿಕ್ಷಕರು ನಿರ್ವಹಿಸಿರುವ ಪ್ರತಿ ಮಗುವಿನ ಕೃತಿ ಸಂಪುಟ (ಚೈಲ್ಡ್ ಪೋರ್ಟ್‌ಫೋಲಿಯೋ)ಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನವನ್ನು ನೀಡುವುದು ಹಾಗೂ ತಮ್ಮ ಸಲಹೆಯನ್ನು ದಾಖಲಿಸುವುದು.

❖ **ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಗಳು :**

- ➢ ವಿದ್ಯಾಗಮ ಕುರಿತು ಮಾಹಿತಿ ಹಂಚಿಕೆಗೆ ಎಲ್ಲಾ ಮುಖ್ಯೋಪಾಧ್ಯಾಯರ ತರಬೇತಿಯನ್ನು ಆಯೋಜಿಸುವುದು.
- ➢ ತಾಲ್ಲೂಕಿನಲ್ಲಿ ಇರುವ ಪ್ರತಿ ಶಿಕ್ಷಕರಿಗೆ ಒಂದರಂತೆ ಕಾಲ್ಪನಿಕ ಕಲಿಕಾ ಕೋಣೆಗಳು ರೂಪಿಸಲು ಶಾಲೆಗಳಿಗೆ ಎಲ್ಲಾ ಸಹಕಾರ ನೀಡುವುದು.
- ➢ ಪ್ರತಿಯೊಂದು ಮಗು ಯಾವುದಾದರೊಂದು ಕಾಲ್ಪನಿಕ ಕಲಿಕಾ ಕೋಣೆಯಲ್ಲಿ ಇರುವುದನ್ನು ಹಾಗೂ ಪ್ರತಿ ಮಗುವಿನ ಕೃತಿ ಸಂಪುಟ (ಚೈಲ್ಡ್ ಪೋರ್ಟ್‌ಫೋಲಿಯೋ) ಸಿದ್ದಪಡಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ➢ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ ಗ್ರಾಮ / ತಾಲ್ಲೂಕು ಪಂಚಾಯತ್ ಮತ್ತು ಇತರೆ ಲಭ್ಯ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಅವುಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದ ಕುರಿತು ಅಗತ್ಯ ಕ್ರಮ ವಹಿಸುವುದು.
- ➢ ಮೇಲೆ ನಿಗದಿಪಡಿಸಿದಂತೆ ಅಭ್ಯಾಸ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಎಲ್ಲಾ ಶಿಕ್ಷಕರು ಕ್ರಮ ವಹಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
- ➢ ಮೇಲ್ವಿಚಾರಣೆ ವರದಿಯನ್ನು ಪ್ರತಿ 15 ದಿನಕ್ಕೊಮ್ಮೆ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಹಾಗೂ ಉಪನಿರ್ದೇಶಕರು(ಅಭಿವೃದ್ಧಿ) ರವರುಗಳಿಗೆ ಸಲ್ಲಿಸತಕ್ಕದ್ದು.

❖ **ಡಯಟ್ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು :**

- ➢ 3 ತಂಡಗಳಿಗೆ (ಕಾಲ್ಪನಿಕ ಕಲಿಕಾ ಕೋಣೆಗಳಿಗೆ) ಪ್ರತ್ಯೇಕವಾದ ತರಬೇತಿ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿ ಸಂಪನ್ಮೂಲ ವ್ಯಕ್ತಿಗಳ ಹಾಗೂ ಶಿಕ್ಷಕರ ತರಬೇತಿಯನ್ನು ನಡೆಸುವುದು.
- ➢ ತರಬೇತಿಯ ಮೂಲಕ ಮಾರ್ಗದರ್ಶಿ ಶಿಕ್ಷಕರು ಸಂಪೂರ್ಣವಾಗಿ ಸ್ವಾವಲಂಬಿಯಾಗುವಂತೆ ಮಾಡಬೇಕು ಹಾಗೂ ಎಲ್ಲಾ ಅಗತ್ಯ ಸಂಪನ್ಮೂಲಗಳನ್ನು ಒದಗಿಸಲು ಅಥವಾ ಅವುಗಳನ್ನು ಪಡೆದುಕೊಳ್ಳುವ ಮಾರ್ಗವನ್ನು (web links ಇತ್ಯಾದಿಗಳು) ತಿಳಿಸುವುದು.

- ಡಯಟ್‌ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರನ್ನು ಈ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.
- ವಿದ್ಯಾರ್ಥಿಗಳು ಪೂರ್ಣಗೊಳಿಸಿದ ಗೃಹಚಟುವಟಿಕೆಗಳ ಅನುಪಾಲನೆಯನ್ನು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಹಾಗು ಸಹ ಶಿಕ್ಷಕರುಗಳು ಸಾಮಾಜಿಕ ಜಾಲತಾಣಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವುದರೊಂದಿಗೆ, ಗೃಹಚಟುವಟಿಕೆಗಳ ಅನುಪಾಲನೆಯನ್ನು ಮಾಡುತ್ತಿರುವ ಬಗ್ಗೆ ಪರಿಶೀಲಿಸುವುದು.
- ಪ್ರತಿ 15 ದಿನಕ್ಕೊಮ್ಮೆ ಈ ಸಂಬಂಧ ಪ್ರಗತಿ ಮಾಹಿತಿಯನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ರವರುಗಳಿಗೆ ಸಲ್ಲಿಸತಕ್ಕದ್ದು.

❖ **ಜಿಲ್ಲಾ ಉಪನಿರ್ದೇಶಕರು(ಆಡಳಿತ) :**

- ತಮ್ಮ ವ್ಯಾಪ್ತಿಯಲ್ಲಿನ ಪ್ರತಿಯೊಂದು ಮಗು ಯಾವುದಾದರೊಂದು ಕಾಲ್ಪನಿಕ ಕಲಿಕಾ ಕೋಣೆಯಲ್ಲಿ ಇರುವುದನ್ನು ಹಾಗೂ ಪ್ರತಿ ಮಗುವಿನ ಕೃತಿ ಸಂಪುಟ (ಚೈಲ್ಡ್ ಪೋರ್ಟ್‌ಫೋಲಿಯೋ) ಸಿದ್ಧಪಡಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ಶಾಲೆಗಳಿಗೆ ಸಕಾಲದಲ್ಲಿ ನಿಗದಿತ ಅನುದಾನ ತಲುಪುವಂತೆ ಕ್ರಮವಹಿಸಬೇಕು.
- ಜಿಲ್ಲೆಯಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳು, ದಾನಿಗಳು, ಶಿಕ್ಷಣಾಸಕ್ತರು ಇತ್ಯಾದಿಗಳನ್ನು ಗುರುತಿಸಿ ಶಾಲೆಗಳಿಗೆ ಮತ್ತು ಮಾರ್ಗದರ್ಶಕ ಶಿಕ್ಷಕರಿಗೆ ಅಗತ್ಯ ಸೇವೆ ಮತ್ತು ಸೌಲಭ್ಯಗಳನ್ನು ಒದಗಿಸಲು ಸಹಕಾರ ನೀಡುವುದು.
- ಜಿಲ್ಲಾ ಹಂತದಲ್ಲಿ ಜಿಲ್ಲಾಡಳಿತ / ಜಿಲ್ಲಾ ಪಂಚಾಯತನ್ನು ಸಂಪರ್ಕಿಸಿ ನಗರಾಬಿವೃದಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮುಂತಾದವುಗಳ ಸಹಯೋಗದೊಂದಿಗೆ ಗ್ರಾಮ / ವಾರ್ಡ್ ಮಟ್ಟದಲ್ಲಿ ವಿದ್ಯಾಗಮ ಕಾರ್ಯಕ್ರಮಕ್ಕೆ ಅವಶ್ಯ ಸುರಕ್ಷತೆಯೊಂದಿಗೆ ವ್ಯವಸ್ಥೆ ಮಾಡಲು ಕ್ರಮವಹಿಸುವುದು
- ಮಾರ್ಗದರ್ಶಿ ಶಿಕ್ಷಕರು ವಿದ್ಯಾಗಮ ಕಾರ್ಯಕ್ರಮ ಕುರಿತು ಸಂಪನ್ಮೂಲ ಅಥವಾ ತಾಂತ್ರಿಕ ಸಹಾಯದ ಬೇಡಿಕೆ ಇಟ್ಟಲ್ಲಿ ಅಗತ್ಯವಾಗಿ ಪೂರೈಸುವುದು.
- ಜಿಲ್ಲಾ ಮಟ್ಟದಲ್ಲಿ ವ್ಯಾಪಕ ಪ್ರಚಾರ ನೀಡಿ ಸಮುದಾಯ ಮತ್ತು ಸಂಘ ಸಂಸ್ಥೆಗಳ ಸಹಕಾರವನ್ನು ಪಡೆದುಕೊಳ್ಳುವುದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.
- ಪೋಷಕರು ತಮ್ಮ ಮಕ್ಕಳನ್ನು ಇರುವಲ್ಲೇ ಬಿಟ್ಟು ವಲಸೆ ಹೋಗಬೇಕಾಗಿರುವ ಪರಿಸ್ಥಿತಿಯಲ್ಲಿ ಅಂತಹ ಮಕ್ಕಳಿಗೆ ಸಮಾಜ ಕಲ್ಯಾಣ, ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಸತಿ ನಿಲಯಗಳಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸುವುದು.
- ಡಿ.ಡಿ.ಪಿ.ಐ ಕಛೇರಿ, ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಹಾಗೂ ವಿಷಯ ಪರಿವೀಕ್ಷಕರನ್ನು ಈ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.
- ಜಿಲ್ಲಾ ಹಂತದಲ್ಲಿ ಜಿಲ್ಲಾಡಳಿತ / ಜಿಲ್ಲಾ ಪಂಚಾಯತ್ ಅನ್ನು ಸಂಪರ್ಕಿಸಿ ನಗರಾಬಿವೃದ್ಧಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

ಮುಂತಾದವುಗಳ ಸಹಯೋಗದೊಂದಿಗೆ ಲಭ್ಯ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಅವುಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದ ಕುರಿತು ಅಗತ್ಯ ಕ್ರಮ ವಹಿಸುವುದು.

- ವಿದ್ಯಾರ್ಥಿಗಳು ಪೂರ್ಣಗೊಳಿಸಿದ ಗೃಹಚಟುವಟಿಕೆಗಳ ಅನುಪಾಲನೆಯನ್ನು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಹಾಗು ಸಹಶಿಕ್ಷಕರುಗಳು ಸಾಮಾಜಿಕ ಜಾಲತಾಣಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವುದರೊಂದಿಗೆ ಅಭ್ಯಾಸ ಚಟುವಟಿಕೆಗಳ ಅನುಪಾಲನೆಯನ್ನು ಮಾಡುತ್ತಿರುವ ಬಗ್ಗೆ ಪರಿಶೀಲಿಸುವುದು.
- ಪ್ರತಿ 15 ದಿನಕ್ಕೊಮ್ಮೆ ಈ ಸಂಬಂಧ ಪ್ರಗತಿ ಮಾಹಿತಿಯನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, / ಪ್ರಾಥಮಿಕ ಶಿಕ್ಷಣ / ಪ್ರೌಢಶಿಕ್ಷಣ ರವರುಗಳಿಗೆ ಸಲ್ಲಿಸತಕ್ಕದ್ದು.

❖ **ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು :**

- ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ಮೇಲೆ ಸೂಚಿಸಿರುವಂತೆ ಕಲಿಕೆಯ ವಿವಿಧ ಆಯಾಮಗಳ ಬಗ್ಗೆ ಹಾಗೂ ಕಲಿಕೆಯಲ್ಲಿ ಬಳಸುವ ವಿವಿಧ ತಂತ್ರೋಪಾಯಗಳು ತಲುಪುವಂತೆ ಖಾತ್ರಿಪಡಿಸಿಕೊಳ್ಳುವುದು.
- ಈ ಮಹತ್ವಪೂರ್ಣ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಇಲಾಖೆಗಳ ಸಹಕಾರ ಮತ್ತು ಸಹಯೋಗ ನೀಡುವ ಮೂಲಕ ವಿದ್ಯಾಗಮ ಕಾರ್ಯಕ್ರಮ ಪ್ರತೀ ಮಗುವಿಗೆ ತಲುಪುವಂತೆ ಕ್ರಮ ವಹಿಸುವುದು.
- ಈ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಜನಪ್ರತಿನಿಧಿಗಳು, ಶಿಕ್ಷಣ ಸ್ಥಾಯಿ ಸಮಿತಿಗಳು, ಸರ್ಕಾರೇತರ ಸಂಘ ಸಂಸ್ಥೆಗಳು ಹಾಗೂ ಇತರೆ ಸಂಘ ಸಂಸ್ಥೆಗಳು ಜಿಲ್ಲಾ ಉಪನಿರ್ದೇಶಕರುಗಳ ಸಹಭಾಗಿತ್ವದಲ್ಲಿ ಸಹಕರಿಸುವಂತೆ ಸಹಕಾರ ನೀಡುವುದು. ಹಾಗೂ ತತ್ಸಂಬಂಧ ಅಗತ್ಯ ಆದೇಶಗಳನ್ನು ನೀಡುವುದು.
- ಕಲಿಕೆಯನ್ನು ನಿರಂತರಗೊಳಿಸುವಲ್ಲಿ ವಿದ್ಯಾಗಮ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಅಗತ್ಯ ಸಲಹೆ ಸೂಚನೆ ಹಾಗೂ ಮಾರ್ಗದರ್ಶನ ನೀಡುವುದು.

## "ಸಂವೇದ" ದೂರದರ್ಶನ ಆಧಾರಿತ ಕಲಿಕೆ

ಕೋವಿಡ್ ಹಿನ್ನಲೆಯಲ್ಲಿ ಶಾಲೆಗಳನ್ನು ಬೌತಿಕವಾಗಿ ಪ್ರಾರಂಭಿಸಲು ವಿಳಂಬವಾಗಿರುವ ಹಿನ್ನಲೆಯಲ್ಲಿ ಇಲಾಖೆಯಿಂದ ರಾಜ್ಯಾದ್ಯಂತ ವಿದ್ಯಾರ್ಥಿಗಳ ಮನೆಗಳಲ್ಲಿ ಲಭ್ಯವಿರುವ ತಂತ್ರಜ್ಞಾನಾಧಾರಿತ ಸಲಕರಣೆಗಳ ಬಗ್ಗೆ ಸಮೀಕ್ಷೆಯನ್ನು ನಡೆಸಲಾಗಿತ್ತು. ಸಮೀಕ್ಷೆಯ ಫಲಿತಾಂಶದಂತೆ ಸುಮಾರು ಶೇ.90ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳ ಮನೆಗಳಲ್ಲಿ ಟಿ.ವಿ ಲಭ್ಯವಿರುತ್ತದೆ. ಇನ್ನುಳಿದ ಸಾಧನಗಳು ಬಹುತೇಕ ವಿದ್ಯಾರ್ಥಿಗಳ ಮನೆಗಳಲ್ಲಿ ಲಭ್ಯವಿಲ್ಲದೆ ಇರುವುದರಿಂದ ಟಿ.ವಿ ಆಧಾರಿತ ಕಲಿಕಾ ಕಾರ್ಯಕ್ರಮವನ್ನು ರೂಪಿಸಲು ನಿರ್ಧರಿಸಲಾಗಿರುತ್ತದೆ. 'ಸಂವೇದ'ವನ್ನು ಮಕ್ಕಳ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಲು 'ವಿದ್ಯಾಗಮ' ಕಾರ್ಯಕ್ರಮದ ಅಂಗವಾಗಿ ರೂಪಿಸಲಾಗಿದೆ. ಈ ಉಪಕ್ರಮವು ಮಾರ್ಗದರ್ಶಿ ಶಿಕ್ಷಕರ ಕಾರ್ಯಕ್ಕೆ ಪೂರಕವಾಗಿರುತ್ತದೆಯೇ ಹೊರತು ಪರ್ಯಾಯವಾಗಿರುವುದಿಲ್ಲ.

❖ ಕಾರ್ಯಕ್ರಮದ ವಿವರ :

- ➢ ಇಲಾಖೆಯಿಂದ ಪ್ರತ್ಯೇಕವಾದ 'ಸಂವೇದ' ವಾಹಿನಿಯನ್ನು ಎಲ್ಲಾ ಸೇವಾದಾರರ ಮೂಲಕ ಬಿತ್ತರಿಸಲು ಪ್ರಾರಂಭಿಸಲಾಗಿದೆ. ಸದರಿ ವಾಹಿನಿಯಲ್ಲಿ ದಿನ ಪೂರ್ತಿ ತರಗತಿ 1 ರಿಂದ 10ರ ವರೆಗೆ ನಿಗದಿಪಡಿಸಿದ ವೇಳಾಪಟ್ಟಿಯಂತೆ ಪಾಠವನ್ನು ಪ್ರಸಾರ ಮಾಡಲಾಗುತ್ತದೆ.
- ➢ ಈ ಪಾಠಗಳನ್ನು ಇಲಾಖೆ ನಿಗದಿಪಡಿಸಿರುವ ವಾರ್ಷಿಕ ಕಾರ್ಯ ಯೋಜನೆ ಪ್ರಕಾರ ರಾಜ್ಯಾದ್ಯಂತ ಪ್ರಚುರಪಡಿಸಲಾಗುವುದು.
- ➢ ಯು–ಟ್ಯೂಬ್ ತರಗತಿಗಳು – 1 ರಿಂದ 10ನೇ ತರಗತಿಯವರೆಗೆ ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿ ಪಾಠಗಳನ್ನು ಪರಿಣಿತ ಶಿಕ್ಷಕರ ಬೋಧನೆಯ ವಿಡಿಯೋ ತಯಾರಿಸಿ ಯು–ಟ್ಯೂಬ್ ಚಾನಲ್ ಮಕ್ಕಳ ವಾಣಿ ಹಾಗೂ ಡಿ.ಎಸ್.ಇ.ಆರ್.ಟಿಯ ಜ್ಞಾನದೀಪ ಗಳಲ್ಲಿ ಅಪ್‌ಲೋಡ್ ಮಾಡಲಾಗುವುದು.
- ➢ 8, 9 ಮತ್ತು 10ನೇ ತರಗತಿಗಳ ಕನ್ನಡ ಮಾಧ್ಯಮದ ಪಾಠಗಳನ್ನು ಪರಿಣಿತ ಶಿಕ್ಷಕರ ಬೋಧನೆಯ ವಿಡಿಯೋ ತಯಾರಿಸಿ ದೂರದರ್ಶನದ ಮೂಲಕ ಪ್ರಸಾರ ಮಾಡಲಾಗುವುದು ಹಾಗೂ ಅದೇ ಪಾಠಗಳ ವಿಡಿಯೋಗಳನ್ನು YouTube Channel 'ಮಕ್ಕಳ ವಾಣಿ' ಹಾಗೂ 'ಡಿ.ಎಸ್.ಇ.ಆರ್.ಟಿ ಜ್ಞಾನ ದೀಪ' ಗಳಲ್ಲಿಯೂ ಅಪ್‌ಲೋಡ್ ಮಾಡಲಾಗುವುದು.
- ➢ ಯಾವುದಾದರೂ ಮಗು ಪಾಠಗಳ ವಿಡಿಯೋ ಪ್ರಸಾರವಾಗುವ ಸಮಯದಲ್ಲಿ ಅನಿರೀಕ್ಷತವಾಗಿ ವೀಕ್ಷಿಸಲು ಸಾಧ್ಯವಾಗದೆ ಇದ್ದಲ್ಲಿ ಮೇಲಿನ YouTube Channel 'ಮಕ್ಕಳ ವಾಣಿ' ಹಾಗೂ 'ಡಿ.ಎಸ್.ಇ.ಆರ್.ಟಿ ಜ್ಞಾನ ದೀಪ' ನಲ್ಲಿ ವೀಕ್ಷಿಸಬಹುದಾಗಿದೆ.
- ➢ 'ಸಂವೇದ' ವಾಹಿನಿಯನ್ನು ಯಾವ ಯಾವ ಸೇವಾದಾರರು ಯಾವ ಸಂಖ್ಯೆಯ ಚಾನಲ್‌ನಲ್ಲಿ ಬಿತ್ತರಿಸುವ ಬಗ್ಗೆ ಮಾಹಿತಿಯನ್ನು ಪ್ರಚುರಪಡಿಸಲಾಗುವುದು.
- ➢ 'ಸಂವೇದ' ವಾಹಿನಿಯಲ್ಲಿ ಬಿತ್ತರಿಸುವ ಪಾಠಗಳ ಒಂದು ವಾರದ ವೇಳಾಪಟ್ಟಿಯನ್ನು ಮುಂಚಿತವಾಗಿಯೇ ಪ್ರಚುರಪಡಿಸಲಾಗುವುದು.
- ➢ ಪಠ್ಯ ಪುಸ್ತಕಗಳ ಡಿಜಿಟಲ್ (e-textbooks) ಪ್ರತಿಗಳು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಕೂಡ ಲಭ್ಯವಿರುತ್ತದೆ.

❖ ಪೋಷಕರ ಪಾತ್ರ :

- ➢ ಮಕ್ಕಳಿಗೆ ಅಗತ್ಯವಿರುವ ಲೇಖನ ಸಾಮಗ್ರಿಗಳು ಮತ್ತು ಚಟುವಟಿಕೆಗಳನ್ನು ಮಾಡಲು ಅಗತ್ಯವಿರುವ ಕಚ್ಚಾವಸ್ತುಗಳನ್ನು ಒದಗಿಸುವುದು.
- ➢ ಪಾಠಗಳು ಪ್ರಸಾರವಾಗುವ ಸಮಯದಲ್ಲಿ ಟಿ.ವಿ / ಕಂಪ್ಯೂಟರ್ / ಮೊಬೈಲ್‌ಗಳನ್ನು ಒದಗಿಸುವುದು ಮತ್ತು ಪ್ರಾಥಮಿಕ ತರಗತಿ ಮಕ್ಕಳಿದ್ದರೆ ತಮ್ಮ ಮೇಲ್ವಿಚಾರಣೆಯಲ್ಲಿ ಮಕ್ಕಳು ಕಾರ್ಯಕ್ರಮಗಳನ್ನು ವೀಕ್ಷಿಸಲು ಪ್ರೋತ್ಸಾಹಿಸುವುದು.
- ➢ ಗೃಹಪಾಠಗಳ ನಿರ್ವಹಣೆಯ ಪರಿಶೀಲನೆಯನ್ನು ನಡೆಸಿ ಮಕ್ಕಳಿಗೆ ಅಗತ್ಯ ಸಹಕಾರವನ್ನು ನೀಡುವುದು.

➢ ಮಕ್ಕಳು ನಿರ್ವಹಿಸಿರುವ ಚಟುವಟಿಕೆಗಳ ಮಾಹಿತಿಯನ್ನು ಮಾರ್ಗದರ್ಶಿ ಶಿಕ್ಷಕರಿಗೆ ಒದಗಿಸಲು ಸಹಕರಿಸುವುದು.

❖ **ಮಾರ್ಗದರ್ಶಿ ಶಿಕ್ಷಕರ ಪಾತ್ರ :**

➢ ಮಾರ್ಗದರ್ಶಿ ಶಿಕ್ಷಕರು ತಮ್ಮ ಕಾಲ್ಪನಿಕ ಕಲಿಕಾ ಕೋಣೆಯ ವಿದ್ಯಾರ್ಥಿಗಳು ಮತ್ತು ಅವರ ಪೋಷಕರುಗಳಿಗೆ ದೂರದರ್ಶನದಲ್ಲಿ ವೀಡಿಯೋ ಪಾಠಗಳು ಪ್ರಸಾರವಾಗುತ್ತಿರುವ ಮಾಹಿತಿಯನ್ನು ನೀಡಿ, ವಿದ್ಯಾರ್ಥಿಗಳು ಈ ಪಾಠಗಳ ಪ್ರಯೋಜನ ಪಡೆದು ಕಲಿಕಾ ಚಟುವಟಿಕೆಗಳಲ್ಲಿ ನಿರತರಾಗಿರುವಂತೆ ಕ್ರಮವಹಿಸುವುದು.

➢ ಈ ರೀತಿ ದೂರದರ್ಶನದಲ್ಲಿ ಪ್ರಸಾರ ಮಾಡುವ ವಿಡೀಯೋ ಪಾಠಗಳನ್ನು ವೀಕ್ಷಿಸಲು ದೂರದರ್ಶನ ಲಭ್ಯತೆ ಇಲ್ಲದಿರುವ ಮಕ್ಕಳ ಮ್ಯಾಪಿಂಗ್ ಕಾರ್ಯ ಕೈಗೊಳ್ಳುವುದು. ಯಾವುದೇ ವಿದ್ಯಾರ್ಥಿಯ ಮನೆಯಲ್ಲಿ ದೂರದರ್ಶನದ ಲಭ್ಯತೆ ಇಲ್ಲದಿದ್ದಲ್ಲಿ ಅಂತಹ ವಿದ್ಯಾರ್ಥಿಯ ಪೋಷಕರ ಅನುಮತಿ ಪಡೆದು ಮನೆಯ ಹತ್ತಿರದಲ್ಲಿ ದೂರದರ್ಶನ ಸೌಲಭ್ಯ ಸ್ಥಳೀಯವಾಗಿ ಲಭ್ಯವಿರುವ ಮೂಲಗಳಿಂದ (ಅವರ ಸ್ನೇಹಿತರು ಅಥವ ಇತರೆ ಮೂಲಗಳಿಂದ) ದೂರದರ್ಶನದ ವೀಕ್ಷಣೆಗೆ ಸೌಲಭ್ಯವನ್ನು ಕಲ್ಪಿಸುವುದು. ಯಾವುದೇ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಕೋವಿಡ್-19 ಸೋಂಕು ಹರಡದಂತೆ ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಸಾಮಾಜಿಕ ಅಂತರವೂ ಒಳಗೊಂಡಂತೆ ವಹಿಸುವಂತೆ ಮಾರ್ಗದರ್ಶನ ನೀಡುವುದು.

➢ ಎಲ್ಲಾ ಮಾರ್ಗದರ್ಶಿ ಶಿಕ್ಷಕರು ಹಾಗೂ ವಿಷಯ ಶಿಕ್ಷಕರು ತಮಗೆ ವಹಿಸಿದ ತರಗತಿ ಹಾಗೂ ವಿಷಯಕ್ಕೆ ಸಂಬಂಧಿಸಿದಂತೆ ನಿರಂತರ ಕಲಿಕಾ ಯೋಜನೆ [CLP] ತಯಾರಿಸಿ ಅನುಷ್ಠಾನ ಮಾಡುವುದು.

➢ ಯಾವುದೇ ವಿದ್ಯಾರ್ಥಿಯು ದೂರದರ್ಶನ ಪಾಠಗಳನ್ನು ವೀಕ್ಷಣೆ ಮಾಡುವುದರಿಂದ ವಂಚಿತರಾಗದಂತೆ ಎಲ್ಲಾ ವಿದ್ಯಾರ್ಥಿಗಳಿಗೂ ಮಾಹಿತಿಯನ್ನು ನೀಡತಕ್ಕದ್ದು. ಈ ಕುರಿತು ಪ್ರತಿ ದಿನ 'ಸಂವೇದ' ಕಾರ್ಯಕ್ರಮ ಪ್ರಸಾರ ಪ್ರಾರಂಭವಾಗುವುದಕ್ಕಿಂತ ಮುಂಚೆ ವಿದ್ಯಾರ್ಥಿಗಳಿಗೆ S.M.S. / ಇತರೆ ವಿಧಾನದ ಮೂಲಕ ನೆನಪಿಸುವುದು.

➢ ದೂರದರ್ಶನದಲ್ಲಿ ಪ್ರಸಾರವಾಗುವ ಪ್ರತಿಯೊಂದು ಪಾಠದಲ್ಲಿ ಚಟುವಟಿಕೆಗಳನ್ನು ಅಳವಡಿಸಿದ್ದು, ಪಾಠದ ನಂತರ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ನೆರವಾಗುವಂತೆ ಅಗತ್ಯ ಸೂಚನೆಗಳನ್ನು ಅಳವಡಿಸಲಾಗಿದ್ದು, ಅದರಂತೆ ಕಲಿಕಾ ಚಟುವಟಿಕೆಗಳಲ್ಲಿ ತೊಡಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.

➢ 'ಸಂವೇದ' (ಇ-ಕ್ಲಾಸ್) ಪಾಠಗಳನ್ನು ಎಲ್ಲಾ ಶಿಕ್ಷಕರು ಸಹ ಕಡ್ಡಾಯವಾಗಿ ವೀಕ್ಷಿಸತಕ್ಕದ್ದು.

➢ ಪ್ರತಿ ದಿನ ತಮ್ಮ ಕಾಲ್ಪನಿಕ ಕಲಿಕಾ ಕೋಣೆಯ ವಿದ್ಯಾರ್ಥಿಗಳು 'ಸಂವೇದ' (ಇ-ಕ್ಲಾಸ್) ಪಾಠಗಳನ್ನು ವೀಕ್ಷಿಸಿದ್ದಾರೆ ಎಂಬುದನ್ನು ಆಯಾ ದಿನವೇ ಖಚಿತಪಡಿಸಿಕೊಳ್ಳತಕ್ಕದ್ದು.

➢ ಪ್ರತಿ ವಿದ್ಯಾರ್ಥಿಯು ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ಕುರಿತು ಮಕ್ಕಳಿಂದ ಲಿಖಿತ ದಾಖಲೆಗಳನ್ನು ಪಡೆದು ಪ್ರತಿ ವಿದ್ಯಾರ್ಥಿಯ ಕೃತಿಸಂಪುಟ (ಚೈಲ್ಡ್ ಪ್ರೊಫೈಲ್) ಅನ್ನು ನಿರ್ವಹಣೆ ಮಾಡತಕ್ಕದ್ದು.

➢ ತರಗತಿವಾರು, ವಿಷಯವಾರು ಪಠ್ಯಪುಸ್ತಕದಲ್ಲಿ ಇರುವ ಪಾಠಗಳ ನಂತರ ನೀಡಿರುವ ಅಭ್ಯಾಸ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಎಲ್ಲಾ ಶಿಕ್ಷಕರು ಅಗತ್ಯ ಕ್ರಮ ವಹಿಸುವುದು.

➢ ಮೇಲೆ ತಿಳಿಸಿರುವಂತೆ ವಿದ್ಯಾರ್ಥಿಗಳ ಕಲಿಕೆಯನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮಾಡಲು ಕ್ರಮಗಳನ್ನು ವಹಿಸಬೇಕು.

➢ ಯಾವುದೇ ಕಾರಣಕ್ಕಾಗಿ ತಮ್ಮ ಮಗು ದೂರದರ್ಶನದ ವೀಡಿಯೋ ಪಾಠಗಳನ್ನು ವೀಕ್ಷಿಸಲು ಸಾಧ್ಯವಾಗದಿದ್ದಲ್ಲಿ ಯೂ–ಟ್ಯೂಬ್ ಅಥವ ದೀಕ್ಷಾ ಪೋರ್ಟಲ್‌ನಲ್ಲಿ ಅಳವಡಿಸಿರುವ ವೀಡಿಯೋಗಳನ್ನು ವೀಕ್ಷಿಸಲು ತಮ್ಮಲ್ಲಿ ಮೊಬೈಲ್ ಸೌಲಭ್ಯ ಲಭ್ಯವಿದ್ದಲ್ಲಿ ಮಕ್ಕಳಿಗೆ ಒದಗಿಸುವಂತೆ ಪೋಷಕರಿಗೆ ತಿಳಿಸುವುದು.

➢ ತರಗತಿ ವಿಧ–1 ವಿದ್ಯಾರ್ಥಿಗಳಿಗೆ ಈ ಮೇಲೆ ತಿಳಿಸಿರುವ ಎಲ್ಲಾ ವಿಶೇಷ ಕ್ರಮಗಳನ್ನು ಕೈಗೊಳ್ಳುವುದು.

❖ **ಮುಖ್ಯೋಪಾಧ್ಯಾಯರ ಪಾತ್ರ :**

➢ ದೂರದರ್ಶನದಲ್ಲಿ ಪ್ರಸಾರವಾಗುವ ಪಾಠಗಳನ್ನು ವಿದ್ಯಾರ್ಥಿಗಳು ವೀಕ್ಷಣೆ ಮಾಡುತ್ತಿರುವುದನ್ನು ಅನುಪಾಲನೆ ಮಾಡಲು ಪ್ರತಿ ಮಾರ್ಗದರ್ಶಿ ಶಿಕ್ಷಕರಿಗೆ ಕಾಲ್ಪನಿಕ ಕಲಿಕಾ ಕೋಣೆಗಳನ್ನು ಹಂಚಿಕೆ ಮಾಡುವುದು.

➢ ತಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ದೂರದರ್ಶನ ಪಾಠಗಳನ್ನು ವೀಕ್ಷಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ಶಿಕ್ಷಕರುಗಳಿಂದ ಮಾಹಿತಿ ಪಡೆದು ಖಚಿತಪಡಿಸಿಕೊಳ್ಳತಕ್ಕದ್ದು. ಪ್ರತಿ ದಿನ ಎಲ್ಲಾ ವಿದ್ಯಾರ್ಥಿಗಳು ದೂರದರ್ಶನ ಪಾಠಗಳನ್ನು ವೀಕ್ಷಿಸುತ್ತಿರುವುದನ್ನು ಸಂಬಂಧಿಸಿದ ಶಿಕ್ಷಕರಿಂದ ಖಚಿತಪಡಿಸಿಕೊಳ್ಳತಕ್ಕದ್ದು. ವಿದ್ಯಾರ್ಥಿಗಳಿಗೆ ನೀಡಲಾಗಿರುವ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿರುವುದನ್ನು ಸಂಬಂಧಿಸಿದ ಶಿಕ್ಷಕರಿಂದ ಖಚಿತಪಡಿಸಿಕೊಳ್ಳತಕ್ಕದ್ದು.

➢ ಪ್ರತಿ ವಿದ್ಯಾರ್ಥಿಯ ಕೃತಿಸಂಪುಟ (ಚೈಲ್ಡ್ ಪ್ರೋಫೈಲ್) ನಿರ್ವಹಿಸಿರುವುದನ್ನು ವಾರಕ್ಕೊಮ್ಮೆ ಪರಿಶೀಲಿಸತಕ್ಕದ್ದು.

➢ ತಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ದೂರದರ್ಶನ ಪಾಠಗಳನ್ನು ವೀಕ್ಷಿಸುತ್ತಿರುವ ಕುರಿತು, ಕಲಿಕಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ಕುರಿತು ಮತ್ತು ದೂರದರ್ಶನ ಪಾಠಗಳ ಬಗ್ಗೆ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನಿಸಿಕೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರತಿ ವಾರಕ್ಕೊಮ್ಮೆ ವರದಿ ಮಾಡುವುದು. ಈ ಕುರಿತು ನಮೂನೆಯನ್ನು ಡಿ.ಎಸ್.ಇ.ಆರ್.ಟಿ ನಿರ್ದೇಶನಾಲಯದಿಂದ ಒದಗಿಸಲಾಗುವುದು.

❖ **ಕ್ಷೇತ್ರ ಶಿಕ್ಷಣಾಧಿಕಾರಿಗಳ ಪಾತ್ರ :**

➢ ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ದೂರದರ್ಶನದ ಪಾಠಗಳನ್ನು ವೀಕ್ಷಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ಮತ್ತು ಯಾವುದೇ ವಿದ್ಯಾರ್ಥಿಯು ಈ ಸೌಲಭ್ಯದಿಂದ ವಂಚಿತವಾಗಿಲ್ಲದಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

➢ ಯಾವುದಾದರೂ ವಿದ್ಯಾರ್ಥಿಯ ಮನೆಯಲ್ಲಿ ಟಿ.ವಿ. ಇಲ್ಲದೇ ಇದ್ದಲ್ಲಿ ಟಿ.ವಿ. ಇರುವಂತಹ ಹತ್ತಿರದ ವಿದ್ಯಾರ್ಥಿಯ ಮನೆಗೆ ಸದರಿ ವಿದ್ಯಾರ್ಥಿಯನ್ನು ಜೊತೆಗೂಡಿಸುವುದು.

➢ ಒಂದು ವೇಳೆ ಯಾವುದಾದರೂ ಜನವಸತಿ ಪ್ರದೇಶದಲ್ಲಿ ಟಿ.ವಿ. ಇರುವ ಯಾವುದೇ ಮನೆಗಳು ಇಲ್ಲದೇ ಇದ್ದಲ್ಲಿ ಸಮುದಾಯ ಭವನ / ಇತರೆ ಸಾರ್ವಜನಿಕ ಕಟ್ಟಡದಲ್ಲಿ ಗ್ರಾಮಪಂಚಾಯಿತಿ ಅಥವಾ ಶಾಲಾ ಮೇಲುಸ್ತುವಾರಿ ಸಮಿತಿಯ ಸಹಕಾರದಿಂದ ಟಿ.ವಿ. ವ್ಯವಸ್ಥೆಯನ್ನು ಕಲ್ಪಿಸುವುದು.

ಅಂತಹ ಕಟ್ಟಡದಲ್ಲಿ 10 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಇಲ್ಲದಂತೆ ನೋಡಿಕೊಳ್ಳುವುದು ಹಾಗೂ ಕಡ್ಡಾಯವಾಗಿ ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು.

- ಸೌಲಭ್ಯಗಳ ಕೊರತೆ ಉಂಟಾದಲ್ಲಿ, ಕಾರ್ಯಕ್ರಮದ ಮಹತ್ವ ಕುರಿತು ಮನವರಿಕೆ ಮಾಡಿಕೊಡುವ ಮೂಲಕ ಗ್ರಾಮ / ತಾಲ್ಲೂಕು ಪಂಚಾಯತ್ ಮತ್ತು ಇತರೆ ಲಭ್ಯ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಅವುಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಗೊಳಿಸುವುದು.
- ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿನ ವಿದ್ಯಾರ್ಥಿಗಳು ದೂರದರ್ಶನದ ವೀಡಿಯೋ ಪಾಠಗಳನ್ನು ವೀಕ್ಷಿಸುತ್ತಿರುವ ಕುರಿತು ಪ್ರತಿ ಶಾಲಾ ಮುಖ್ಯಸ್ಥರಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸುವುದು.
- ತಮ್ಮ ತಾಲ್ಲೂಕಿನ ಎಲ್ಲಾ ಶಿಕ್ಷಕರು ದೂರದರ್ಶನ ಪಾಠಗಳನ್ನು ವೀಕ್ಷಿಸುತ್ತಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- ದೂರದರ್ಶನದ ವೀಡಿಯೋ ಪಾಠಗಳ ನಂತರ ವಿದ್ಯಾರ್ಥಿಗಳೊಂದಿಗೆ ಶಿಕ್ಷಕರು ಸಂವಹನ ಸಾಧಿಸಿ ಅವರಿಗೆ ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯಮಾಪನ ಚಟುವಟಿಕೆಗಳನ್ನು ನೀಡುತ್ತಿರುವುದನ್ನು ಹಾಗೂ ವಿದ್ಯಾರ್ಥಿಗಳು ಈ ಚಟುವಟಿಕೆಗಳನ್ನು ನಿರ್ವಹಿಸುತ್ತಿರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
- ತರಗತಿವಾರು, ವಿಷಯವಾರು ಇರುವ ಪಠ್ಯಪುಸ್ತಕದಲ್ಲಿ ಪಾಠಗಳ ನಂತರ ನೀಡಿರುವ ಅಭ್ಯಾಸ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಎಲ್ಲಾ ಶಿಕ್ಷಕರು ಕ್ರಮ ವಹಿಸಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- ಮೇಲ್ವಿಚಾರಣೆ ವರದಿಯನ್ನು ಪ್ರತಿ 15 ದಿನಕ್ಕೊಮ್ಮೆ ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ) ಹಾಗೂ ಉಪನಿರ್ದೇಶಕರು(ಅಭಿವೃದ್ಧಿ) ರವರುಗಳಿಗೆ ಸಲ್ಲಿಸತಕ್ಕದ್ದು.

**❖ ಉಪನಿರ್ದೇಶಕರ(ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರ ಪಾತ್ರ :**

- ಜಿಲ್ಲಾ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಣಾಧಿಕಾರಿಗಳು ಡಿ.ಡಿ.ಪಿ.ಐ ಕಛೇರಿ, ಶಿಕ್ಷಣಾಧಿಕಾರಿಗಳು ಅಕ್ಷರ ದಾಸೋಹ, ಡಯಟ್‌ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು, ಸಹಾಯಕ ನಿರ್ದೇಶಕರು, ಅಕ್ಷರ ದಾಸೋಹ ಹಾಗೂ ವಿಷಯ ಪರಿವೀಕ್ಷಕರನ್ನು ಈ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸುವುದು.
- ಜಿಲ್ಲಾ ಹಂತದಲ್ಲಿ ಜಿಲ್ಲಾಡಳಿತ / ಜಿಲ್ಲಾ ಪಂಚಾಯತ್ ಅನ್ನು ಸಂಪರ್ಕಿಸಿ ನಗರಾಬಿವೃದಿ ಇಲಾಖೆ, ಪಂಚಾಯತ್ ರಾಜ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮುಂತಾದವುಗಳ ಸಹಯೋಗದೊಂದಿಗೆ ಟಿ.ವಿ ಇಲ್ಲದ ಮಕ್ಕಳಿಗೆ ಗ್ರಾಮ / ವಾರ್ಡ್ ಮಟ್ಟದಲ್ಲಿ ಟಿ.ವಿ ವೀಕ್ಷಣೆಗೆ ಅವಶ್ಯ ಸುರಕ್ಷತೆಯೊಂದಿಗೆ ವ್ಯವಸ್ಥೆ ಮಾಡಲು ಕ್ರಮವಹಿಸುವುದು.
- ಆಯಾ ಡಯಟ್ ಪ್ರಾಂಶುಪಾಲರು ಶಿಕ್ಷಕರಿಗೆ / ಮುಖ್ಯಶಿಕ್ಷಕರಿಗೆ ಅವಶ್ಯ ಮಾರ್ಗದರ್ಶನ ನೀಡುವುದು.

- ತಾಲ್ಲೂಕು ಹಂತದ ಅಧಿಕಾರಿಗಳ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೂ ದೂರದರ್ಶನದ ಲಭ್ಯತೆ ಇರುವ ಬಗ್ಗೆ ಮಾಹಿತಿ ಪಡೆಯುವುದು.
- ವಿದ್ಯಾರ್ಥಿಗಳು ಪೂರ್ಣಗೊಳಿಸಿದ ಗೃಹಚಟುವಟಿಕೆಗಳ ಅನುಪಾಲನೆಯನ್ನು ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಹಾಗು ಸಹ ಶಿಕ್ಷಕರುಗಳು ಸಾಮಾಜಿಕ ಜಾಲತಾಣಗಳ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸಿ ಕಲಿಕೆಯನ್ನು ಖಾತ್ರಿಪಡಿಸಿಕೊಳ್ಳುವುದರೊಂದಿಗೆ, ಗೃಹಚಟುವಟಿಕೆಗಳ ಅನುಪಾಲನೆಯನ್ನು ಮಾಡುತ್ತಿರುವ ಬಗ್ಗೆ ಪರಿಶೀಲಿಸುವುದು.
- ಪ್ರತಿ 15 ದಿನಕ್ಕೊಮ್ಮೆ ಈ ಸಂಬಂಧ ಪ್ರಗತಿ ಮಾಹಿತಿಯನ್ನು ನಿರ್ದೇಶಕರು, ಡಿ.ಎಸ್.ಇ.ಆರ್.ಟಿ / ಪ್ರಾಥಮಿಕ ಶಿಕ್ಷಣ / ಪ್ರೌಢಶಿಕ್ಷಣ ರವರುಗಳಿಗೆ ಸಲ್ಲಿಸತಕ್ಕದ್ದು.

ಸಂವೇದ ಕಾರ್ಯಕ್ರಮದ ಪ್ರಥಮ ಭಾಗವಾಗಿ 8 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ದಿನಾಂಕ: 20.07.2020 ರಿಂದ "ಸೇತು ಬಂಧ" ಪಾಠಗಳನ್ನು ಪ್ರಸಾರ ಮಾಡಲಾಗುವುದು. (ವೇಳಾ ಪಟ್ಟಿ ಲಗತ್ತಿಸಿದೆ). ಸೇತು ಬಂಧ ಪಾಠ ಪ್ರಸಾರದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

- ಪ್ರತಿ ವಾರದಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಕಾರ್ಯಕ್ರಮ ಪ್ರಸಾರ.
- ಪ್ರತಿ ಪಾಠ 30 ನಿಮಿಷಗಳದ್ದಾಗಿದ್ದು, ಪ್ರತಿ ದಿನ ಮೂರು ತರಗತಿಗಳಿಗೆ ಒಟ್ಟು 8 ಪಾಠಗಳ ಪ್ರಸಾರ.
- ಪ್ರತಿ ಪಾಠದಲ್ಲಿ ಚಟುವಟಿಕೆಗಳನ್ನು ಅಳವಡಿಸಿದ್ದು, ಪಾಠದ ನಂತರ ವಿದ್ಯಾರ್ಥಿಗಳು ಕಲಿಕಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ನೆರವಾಗುವಂತೆ ಅಗತ್ಯ ಸೂಚನೆಗಳ ಅಳವಡಿಕೆ.
- ದೂರದರ್ಶನದಲ್ಲಿ ಪ್ರಸಾರ ಮಾಡಲಾಗುವ ಪಾಠಗಳನ್ನು ಡಿ.ಎಸ್.ಇ.ಆರ್.ಟಿಯ ಜ್ಞಾನದೀಪ ಯೂ-ಟ್ಯೂಬ್ ಚಾನೆಲ್, ಮಕ್ಕಳವಾಣಿ ಯೂ-ಟ್ಯೂಬ್ ಚಾನೆಲ್‌ಗಳಲ್ಲಿ ಮತ್ತು ದೀಕ್ಷಾ ಪೋರ್ಟಲ್‌ನಲ್ಲಿ ಸಹ ಅಳವಡಿಸಲಾಗುವುದು ಮತ್ತು ಡಿ.ಎಸ್.ಇ.ಅರ್.ಟಿಯ ವೆಬ್‌ಸೈಟ್‌ನಲ್ಲಿ ಸಹ ಯೂ-ಟ್ಯೂಬ್ ಪಾಠಗಳಿಗೆ ಲಿಂಕ್ ಕಲ್ಪಿಸಲಾಗುವುದು.

*"ವಿದ್ಯಾಗಮ ಕಾರ್ಯಕ್ರಮವು ಕೇವಲ ಮಾರ್ಗದರ್ಶಿಯಾಗಿದ್ದು, ಮಾರ್ಗಸೂಚಿಯಾಗಿರುವುದಿಲ್ಲ, ಪ್ರತಿಯೊಂದು ಮಾರ್ಗದರ್ಶಿ ಶಿಕ್ಷಕರು ತಮಗೆ ಹಂಚಿಕೆಯಾಗಿರುವ ಮಕ್ಕಳ ಕಲಿಕಾ ಮಟ್ಟ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು, ಪರಿಗಣಿಸಿ ತಮ್ಮದೇ ಆದ ವಿಧಾನವನ್ನು ಅಳವಡಿಸಿಕೊಂಡು ವಿದ್ಯಾಗಮದ ಧ್ಯೇಯೋದ್ಧೇಶಗಳನ್ನು ಸಾಧಿಸುವುದು.*

*ರಾಜ್ಯದಲ್ಲಿ ಪ್ರಮುಖವಾಗಿ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ, ಕರಾವಳಿ ಪ್ರದೇಶ, ಮಲೆನಾಡು ಪ್ರದೇಶ, ಬಯಲು ಸೀಮೆ ಇತ್ಯಾದಿ ಪ್ರಮುಖ ಭೌಗೋಳಿಕ ಪ್ರದೇಶಗಳಿದ್ದು, ಪ್ರತೀ ಪ್ರದೇಶದಲ್ಲಿ ತನ್ನದೇ ಆದ ಸಾಧಕ ಬಾಧಕಗಳಿರುತ್ತವೆ. ಆದ್ದರಿಂದ ಪ್ರತಿಯೊಂದು ಪ್ರದೇಶ / ಜಿಲ್ಲೆ / ತಾಲ್ಲೂಕುಗಳಲ್ಲಿ ಸ್ಥಳೀಯ ಆಡಳಿತಗಳು ಹಾಗೂ ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮದೇ ಆದ ಮಾದರಿಯನ್ನು ಅಳವಡಿಸಿಕೊಂಡು ಧ್ಯೇಯೋದ್ಧೇಶಗಳನ್ನು ಸಾಧಿಸಬಹುದಾಗಿದೆ.*

*ರಾಜ್ಯದಲ್ಲಿ ಹಲವಾರು ಸರ್ಕಾರೇತರ ಸಂಸ್ಥೆಗಳು ಯಶಸ್ವಿಯಾಗಿ ಕೆಲವು ಪ್ರಾಯೋಗಗಳನ್ನು ಸಣ್ಣ ಮಟ್ಟದಲ್ಲಿ ಮಾಡಿದ್ದು, ಸದರಿ ಪ್ರಯೋಗಗಳನ್ನು ಪೂರ್ಣ ಜಿಲ್ಲೆ ಅಥವಾ ತಾಲ್ಲೂಕಿಗೆ ಅಳವಡಿಸಕೊಳ್ಳಬಹುದಾಗಿದ್ದಲ್ಲಿ ಜಿಲ್ಲೆಗಳು ಅದಕ್ಕೆ ಸ್ವತಂತ್ರರಾಗಿರುತ್ತಾರೆ.*

*ವಿದ್ಯಾಗಮ ಮಾರ್ಗದರ್ಶಿಯನ್ನು ಅದೇ ಮಾದರಿಯಲ್ಲಿ ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಪ್ರಯತ್ನಿಸದೆ ತಾಲ್ಲೂಕು, ಜಿಲ್ಲೆ ಮತ್ತು ಪ್ರದೇಶಕ್ಕೆ ತಕ್ಕಂತೆ ಮಾರ್ಪಾಡುಗಳನ್ನು ಮಾಡಿಕೊಂಡು ಒಟ್ಟಾರೆಯಾಗಿ ಯೋಜನೆಯ ಧ್ಯೇಯೋದ್ದೇಶಗಳನ್ನು ಸಾಧಿಸಲು ಶ್ರಮಿಸುವುದು."*

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಗೆ :

1. ಅಪರ ಆಯುಕ್ತರು, ಧಾರವಾಡ / ಕಲ್ಬುರ್ಗಿ, ರವರುಗಳಿಗೆ ತಮ್ಮ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಿದೆ.
2. ರಾಜ್ಯದ ಎಲ್ಲಾ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ
3. ರಾಜ್ಯದ ಶಿಕ್ಷಣ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕರಿಗೆ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ) ಅಗತ್ಯ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಬ್ಲಾಕ್‌ಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ (ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರ ಮೂಲಕ).
6. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಸ್ಥರಿಗೆ / ಆಡಳಿತ ಮಂಡಳಿಯವರಿಗೆ ಅಗತ್ಯ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ).

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಸಲ್ಲಿಸುತ್ತಾ ಸದರಿ ಅಂಶದ ಬಗ್ಗೆ ಮಾನ್ಯರ ಅವಗಾಹನೆಗೆ ತರಲು ವಂದನಾಪೂರ್ವಕವಾಗಿ ಕೋರಿದೆ.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾಹಿತಿಗಾಗಿ
4. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಮಾಹಿತಿಗಾಗಿ

ಅನುಬಂಧ–I

## ತಂತ್ರಜ್ಞಾನ ಬಳಕೆಯ ಮಾತೃಕೆ

| ಆಯಾಮ | 3–6 ವರ್ಷಗಳು (ಪೂರ್ವ ಪ್ರಾಥಮಿಕ) | 1 ರಿಂದ 2 ನೇ ತರಗತಿ | 3 ರಿಂದ 5 ನೇ ತರಗತಿ | 6 ರಿಂದ 8 ನೇ ತರಗತಿ | 9 ರಿಂದ 10 ನೇ ತರಗತಿ |
|---|---|---|---|---|---|
| ಪ್ರತಿ ಅಧಿವೇಶನದ ಪರದೆ ಸಮಯ (ನಿಮಿಷಗಳಲ್ಲಿ / (ಗರಿಷ್ಠ) | 30 | 30 | 30 | 30 to 45 | 30 to 45 |
| ಪ್ರತಿ ದಿನದ ಗರಿಷ್ಠ ಅಧಿವೇಶನಗಳು | 1 | 2 | 2 | 3 | 4 |
| ಪ್ರತಿ ವಾರದ ಆವರ್ತನ | 3 ದಿನಗಳು | 3 ದಿನಗಳು | 5 ದಿನಗಳು | 5 ದಿನಗಳು | 5 ದಿನಗಳು |
| ಪಾಲಕರ ಉಪಸ್ಥಿತಿ / ಪಾಲಕರ ಅನುಮತಿಯ ಮೇರೆಗೆ ವಯಸ್ಕ ಸದಸ್ಯರ ಮೇಲ್ವಿಚಾರಣೆ | ಕಡ್ಡಾಯ | ಕಡ್ಡಾಯ | ಅಪೇಕ್ಷಣೀಯ | ಐಚ್ಛಿಕ | – |
| Asynchronous ಅಥವಾ Synchronous (ನೇರ ಪ್ರಸಾರ ಅಥವಾ ಮುದ್ರಿತ) | ಅವಶ್ಯಕತೆಗನುಗುಣವಾಗಿ Synchronous ಮತ್ತು Asynchronous ವಿಧಾನಗಳ ನ್ಯಾಯಯುತ ಮಿಶ್ರಣ | | | | |
| ಸಂವಾದಾತ್ಮಕ (ಸಕ್ರಿಯ ಅಥವಾ ನಿಷ್ಕ್ರಿಯ) | ಸಂವಾದಾತ್ಮಕ | ಸಂವಾದಾತ್ಮಕ | ಸಂವಾದಾತ್ಮಕಕ್ಕೆ ಆದ್ಯತೆ | ಸಂವಾದಾತ್ಮಕಕ್ಕೆ ಆದ್ಯತೆ | ಸಂವಾದಾತ್ಮಕಕ್ಕೆ ಆದ್ಯತೆ |
| ವಸ್ತು ವಿಷಯ | ಆಟ, ಕಥೆಮತ್ತು ಪ್ರಾಸಗಳುಹಾಗೂ ಇತರ ನವೀನ ಚಟುವಟಿಕೆಗಳುಮಾತ್ರ | ಆಟ, ಕಥೆಮತ್ತು ಪ್ರಾಸಗಳು ಹಾಗೂ ಇತರ ನವೀನ ಚಟುವಟಿಕೆಗಳು ಮಾತ್ರ | 25: (ಪಠ್ಯ) 75: (ಸಾಮಾನ್ಯ/ ಪಠ್ಯ ಪೂರಕ) | 50: (ಪಠ್ಯ) 50:(ಸಾಮಾನ್ಯ/ ಪಠ್ಯ ಪೂರಕ) | 75: (ಪಠ್ಯ) 25:(ಸಾಮಾನ್ಯ/ ಪಠ್ಯ ಪೂರಕ) |

## ಅನುಬಂಧ–2A

1. ಸಲಹಾತ್ಮಕ ದೈನಂದಿನ ಕಾರ್ಯಸೂಚಿ:

ಆರಂಭದಲ್ಲಿ ಕೋವಿಡ್ 19 ಸೋಂಕು ಹರಡದಂತೆ ಮಕ್ಕಳು ವಹಿಸಬೇಕಿರುವ ಎಚ್ಚರಿಕೆ ಕ್ರಮಗಳ ಕುರಿತು ತಿಳುವಳಿಕೆ ನೀಡುವುದು.

- ಸಂವಿಧಾನದ ಪೂರ್ವ ಪೀಠಿಕೆ (Preamble) ವಾಚನ
- ವಿದ್ಯಾರ್ಥಿಗಳ ವಯೋಮಾನ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಗುಂಪುಗಳನ್ನು ರಚಿಸಿಕೊಳ್ಳುವುದು
- ತರಗತಿವಾರು ಮತ್ತು ವಿಷಯವಾರು ಸೇತುಬಂಧ ಶಿಕ್ಷಣ–ಸಂಭವನೀಯ ಸಮಸ್ಯಾತ್ಮಕ ಸಾಮರ್ಥ್ಯಗಳನ್ನು ಮತ್ತು ಕಲಿಕಾ ಸಮಸ್ಯೆಗಳನ್ನು ಗುರುತಿಸಿ ಮಕ್ಕಳಿಗೆ ಪರಿಹಾರ ಬೋಧನೆಯನ್ನು ನಡೆಸುವುದು
- ಚಟುವಟಿಕೆಗಳನ್ನು ರೂಪಿಸಿ ಮಕ್ಕಳ ಸುಗಮ ಕಲಿಕೆಗೆ ನೆರವಾಗುವುದು
- ಗೆಳೆಯರ ಸಹಾಯದ ಕಲಿಕೆಗೆ ನೆರವಾಗುವುದು
- ತರಗತಿಗೆ ಅನುಗುಣವಾಗಿ ಭಾಷಾಭ್ಯಾಸ, ಕಲಿಕಾ ಕೊರತೆಗಳನ್ನು ಗುರುತಿಸಿ ಪರಿಹಾರ ಬೋಧನೆಗಳನ್ನು ಮಾಡುವುದು.
- ಓದುವ, ಬರೆಯುವ, ಗಣಿತದ ಮೂಲ ಕ್ರಿಯೆಗಳಾದ ಕೂಡುವುದು, ಕಳೆಯುವುದು, ಗುಣಿಸುವುದು ಭಾಗಿಸುವುದರಲ್ಲಿ ಪರಿಪೂರ್ಣತೆಯನ್ನು ಸಾಧಿಸುವಲ್ಲಿ ಮಕ್ಕಳಿಗೆ ಅನುಕೂಲಿಸುವುದು.
- ವಿಶೇಷವಾಗಿ ಕಲಿಯುವುದನ್ನು ಕಲಿಸುವುದು. ಕಲಿಕಾ ಕೌಶಲ್ಯಗಳನ್ನು ಬೆಳೆಸುವುದು.
- ಸ್ವ ಕಲಿಕೆಗೆ ಹೆಚ್ಚು ಮಹತ್ವ ನೀಡುವುದು.
- ಸಣ್ಣಪುಟ್ಟ ಕಥೆಗಳನ್ನು ಓದುವುದು, ಓದಿದ ಕಥೆಗಳನ್ನು ಸ್ನೇಹಿತರಿಗೆ ಹೇಳುವುದು, ಚರ್ಚಿಸುವುದು, ಸ್ವಯಂ ಕಥೆಗಳನ್ನು ಸೃಷ್ಟಿಸುವುದು, ಚಿತ್ರ ಬರೆಯುವ ಅವಕಾಶ ಕಲ್ಪಿಸುವುದು.
- ಅಕ್ಷರಭ್ಯಾಸ, ಶಬ್ದಗಳ ಉಚ್ಚಾರ, ವಾಕ್ಯ ರಚನೆ, ವ್ಯಾವಹಾರಿಕ ಗಣಿತದ ಸನ್ನಿವೇಶ ಸೃಷ್ಠಿಸಿ, ಸಂಭಾಷಣೆ, ಚೌಕಾಶಿ, ಮನವೊಲಿಸುವುದು, ತಂತ್ರಗಳನ್ನು ರೂಪಿಸುವುದು, ಮಕ್ಕಳಲ್ಲಿ ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸುವುದು, ಕ್ಲೇ ಮಾಡ್ಲಿಂಗ್, ಪೇಪರ್ ಕಟ್ಟಿಂಗ್, ಪೇಂಟಿಂಗ್, ಗಾಳಿ ಪಠ ಮಾಡಿಸುವುದು, ಹಾಡು, ಕಥೆಗಳಂತಹ ಆಸಕ್ತಿ ಹುಟ್ಟಿಸುವ ಕೆಲಸಗಳನ್ನು ಮಾಡಿಸುವುದು.
- ಶಿಕ್ಷಕರು ತಮ್ಮ ಶಾಲೆಯಲ್ಲಿರುವ ಗಣಿತ ಕಲಿಕಾ ಆಂದೋಲನ ಮತ್ತು ಓದು ಕರ್ನಾಟಕ ಕಲಿಕಾ ಪರಿಕರಗಳನ್ನು ಬಳಸುವ ಮೂಲಕ ಮಕ್ಕಳಲ್ಲಿ ಕಲಿಕೆಯಲ್ಲಿ ಹೆಚ್ಚು ಆಸಕ್ತಿ ಹುಟ್ಟಿಸುವುದು. ಈ ಮೂಲಕ ನಿರ್ದಿಷ್ಟ ಸಾಮರ್ಥ್ಯಗಳನ್ನು ಬೆಳೆಸುವುದು.
- ಮಕ್ಕಳಿಗೆ ವಿಶ್ಲೇಷಣಾತ್ಮಕ ವಿಮರ್ಶನಾತ್ಮಕ ಹಾಗೂ ಸಂಶೋಧನಾತ್ಮಕ ಸಾಮರ್ಥ್ಯ ವೃದ್ಧಿಸಲು ಯೋಜನಾ ಕಾರ್ಯಗಳನ್ನು ವಹಿಸುವುದು.
- ಗ್ರಾಮದಲ್ಲಿ/ಓಣಿ, ನಗರ ಪ್ರದೇಶದ ವಾರ್ಡ್‌ಗಳು ಕಂಟೈನ್ಮೆಂಟ್ ಜೋನ್ ಎಂದು ಗುರುತಿಸಲ್ಪಟ್ಟ ಸಂದರ್ಭದಲ್ಲಿ ಮುಂದಿನ ಆದೇಶದವರೆಗೂ ಕಲಿಕಾ ಕಏಂದ್ರವನ್ನು ಸ್ಥಗಿತಗೊಳಿಸತಕ್ಕದ್ದು.

## ಅನುಬಂಧ-2B

## ಕಲಿಯುವ ಕೌಶಲ್ಯಗಳನ್ನು ಮಕ್ಕಳಲ್ಲಿ ರೂಢಿ ಮಾಡಿಸುವ ವಿಧ

ವಿದ್ಯಾರ್ಥಿಗಳಿಗೆ ಕಲಿಯುವ ಕೌಶಲಗಳನ್ನು ಬೆಳೆಸುವ ಪ್ರಯತ್ನಗಳನ್ನು ಮಾಡುವ ಮೂಲಕ ಅವರಲ್ಲಿ ಕಲಿಕೆಯ ಸ್ವಾಯತ್ತತೆಯನ್ನು ಬೆಳೆಸುವುದು. ತನ್ನ ಸಹಪಾಠಿಗಳಿಗೆ ಕಲಿಸುವುದು.

- ತಾನು ಓದಿದ, ಪ್ರತಿ ವಿಷಯವನ್ನು ವ್ಯವಸ್ಥಿತವಾಗಿ ಟಿಪ್ಪಣಿ ಸಿದ್ಧಪಡಿಸಿಕೊಳ್ಳುವುದು.
- ತಾನು ಭಾಗವಹಿಸಿದ ಸಭೆ, ಸಮಾರಂಭ, ತರಗತಿಗಳಲ್ಲಿ ಸ್ವೀಕರಿಸಿದ ಕಲಿಕಾಂಶಗಳನ್ನು ಸದಾ ದಾಖಲಿಸಿಕೊಳ್ಳುವುದು.
- ತನ್ನ ಓದಿನ ಪ್ರಶಸ್ತವಾದ ಸಮಯವನ್ನು ಗೊತ್ತುಪಡಿಸಿಕೊಂಡು (ಪ್ರೊಡಕ್ಟೀವ್ ಟೈಮ್) ಓದುವುದು.
- ಓದಿದ ವಿಷಯವನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವುದು, ಚರ್ಚಿಸುವುದು.
- ಚಿತ್ರದ ಮೂಲಕ, ಡಯಗ್ರಾಂಗಳ ಮೂಲಕ, ಸಂಕೇತಾಕ್ಷರಗಳ ಮೂಲಕ (ವಿಜ್ಯುಯಾರ್) ನೆನಪಿನಲ್ಲಿಡುವುದು ಮತ್ತು ತಮ್ಮ ಕಲಿಕೆಯನ್ನು ವಿವಿಧ ರೂಪಗಳಲ್ಲಿ ದೃಢೀಕರಿಸಿಕೊಳ್ಳುವುದು.
- ವಿದ್ಯಾರ್ಥಿಗಳಲ್ಲಿ ಕಲಿಕೆಯಲ್ಲಿ ಸ್ವಾಯತ್ತತೆಯನ್ನು ಮೂಡುವಂತೆ ಮಾಡುವುದು.
- ಸ್ವತಂತ್ರವಾಗಿ ಕಲಿಯುವ ವಾತಾವರಣವನ್ನು ನಿರ್ಮಿಸುವುದು
- ಕಲಿಕೆಯಲ್ಲಿ ಸ್ವಯಂ ಶಿಸ್ತನ್ನು ರೂಢಿಸಿಕೊಳ್ಳುವುದು
- ಸಂಗಡಿಗರೊಂದಿಗೆ ಸಹಪಾಠಿಗಳೊಂದಿಗೆ ಕೂಡಿ ಕಲಿಯುವುದು
- ಸಹಪಾಠಿಗಳೊಂದಿಗೆ ಕಲಿಕೆಯನ್ನು ಹಂಚಿಕೊಳ್ಳುವುದು
- ತಮ್ಮ ಕಲಿಕೆಯನ್ನು ವ್ಯವಸ್ಥಿತವಾಗಿ ರಚಿಸಿಕೊಳ್ಳುವಿಕೆ
- ಕಲಿಕೆಯನ್ನು ನಿರಂತರವಾಗಿ ಮೌಲ್ಯಮಾಪನಕ್ಕೆ ಒಳಪಡಿಸಿಕೊಳ್ಳುವಿಕೆ
- ಸಲಹೆಗಳನ್ನು ಪಡೆಯುವಿಕೆ, ಮಾಹಿತಿಯನ್ನು ಸಂಗ್ರಹಿಸುವಿಕೆ.
- ವಿಮರ್ಶಾತ್ಮಕ ಚಿಂತನೆಯನ್ನು ಮಾಡುವುದು.
- ಕಲಿಯುವ ಕೌಶಲಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳುವುದು, ಓದುವುದು, ಟಿಪ್ಪಣಿ ಮಾಡಿಕೊಳ್ಳುವುದು, ಸಂಕೇತಾಕ್ಷರಗಳ ಮೂಲಕ, ಡೈಗ್ರಾಮ, ಚಿತ್ರಗಳ ಮೂಲಕ ತಾವು ಕಲಿತಿರುವುದನ್ನು ಅಂತರಗತ ಮಾಡಿಕೊಳ್ಳುವುದು.
- ಸ್ವಯಂ ಕಲಿಕೆಗೆ ಸಂಭಾಷಣೆ ಏಕಪಾತ್ರ ಅಭಿನಯ ಮತ್ತು ಕಿರುನಾಟಕ ಚಟುವಟಿಕೆಗಳನ್ನು ಬಳಸಿಕೊಳ್ಳುವುದು.

# ಸಮಗ್ರ ಶಿಕ್ಷಣ ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ3/DIRP/140JDA2020/ಪಿಸೋಅ/13553

ದಿನಾಂಕ: 10.08.2020


## ಜ್ಞಾಪನ

ವಿಷಯ: ವಿದ್ಯಾಗಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸುವ ಕುರಿತು.

ಉಲ್ಲೇಖ:
1. ಮಾನ್ಯ ಆಯುಕ್ತರು, ಸಾ.ಶಿ.ಇ ಮತ್ತು ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಕ ಇವರ ಜಂಟಿ ಸುತ್ತೋಲೆ ಸಂಖ್ಯೆ: ಸಶಿಕಾ/ವಿದ್ಯಾಗಮ.ಅ/13497/2020-21 ದಿ: 04.08.2020.
2. ಮಾನ್ಯ ಆಯುಕ್ತರು, ಸಾ.ಶಿ.ಇ ಇವರ ಸುತ್ತೋಲೆ ಸಂಖ್ಯೆ:ಸಶಿಕಾ/ವಿದ್ಯಾಗಮ.ಅ/13497 /2020-21 ದಿ: 04.08.2020.
3. ನಿರ್ದೇಶಕರು, ಮಕ್ಕಳ ರಕ್ಷಣಾ ಯೋಜನೆ, ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ ಇವರ ಪತ್ರ ಸಂಖ್ಯೆ: ಐ.ಸಿ.ಪಿ.ಎಸ್/ಜೆ.ಸಿ.ಎಲ್/ಡಬ್ಲ್ಯೂಪಿ:4/2020/16/ 2020-21 ದಿ: 08.08.2020.

*******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ 01 ಮತ್ತು 02 ರನ್ವಯ 2020-21ನೇ ಸಾಲಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗಬೇಕಾಗಿದ್ದು, ಕೋವಿಡ್-19 ರ ಹಿನ್ನೆಲೆಯಲ್ಲಿ ಮಕ್ಕಳ ಆರೋಗ್ಯದ ಸುರಕ್ಷತೆ ದೃಷ್ಟಿಯಿಂದ ಶಾಲೆಗಳನ್ನು ಪ್ರಾರಂಭಿಸದೇ ಇರುವುದರಿಂದಾಗಿ ಮಕ್ಕಳ ಔಪಚಾರಿಕ ಕಲಿಕೆಗೆ ಹಿನ್ನಡೆ ಉಂಟಾಗಿದೆ. ಈ ಸಂದರ್ಭದಲ್ಲಿ ಮಕ್ಕಳ ಕಲಿಕೆಯ ನಿರಂತರತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಹಾಗೂ ಮಕ್ಕಳನ್ನು ಶಾಲೆಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಿಸಲು ಇಲಾಖೆಯು ವಿದ್ಯಾಗಮ ಎನ್ನುವ ಕಲಿಕಾ ಕಾರ್ಯಕ್ರಮವನ್ನು ರೂಪಿಸಿದೆ.

ಉಲ್ಲೇಖ 03 ರನ್ವಯ, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬರುವ ಮಕ್ಕಳಿಗೂ ವಿದ್ಯಾಗಮ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕಾಗಿದೆ. ಈ ಅನುಷ್ಠಾನ ಕಾರ್ಯದಲ್ಲಿ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯೊಂದಿಗೆ ಸಮನ್ವಯ ಸಾಧಿಸಲು ಮತ್ತು ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವಲ್ಲಿ ಎದುರಾಗಬಹುದಾದ ತೊಡಕುಗಳನ್ನು ಪರಿಹರಿಸಲು, ಸಹ ನಿರ್ದೇಶಕರು (ಗುಣಮಟ್ಟ ಖಾತರಿ) ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರನ್ನು ರಾಜ್ಯ ನೋಡಲ್ ಅಧಿಕಾರಿಯಾಗಿ ಮತ್ತು ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಇವರನ್ನು ಜಿಲ್ಲಾ ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ಸದರಿ ಅಧಿಕಾರಿಗಳು ಈ ನಿಟ್ಟಿನಲ್ಲಿ ಕೂಡಲೇ ಕ್ರಮವಹಿಸಿ, ಮಾನ್ಯ ರಾಜ್ಯ ಯೋಜನಾ ನಿರ್ದೇಶಕರ ಆಪ್ತ ಶಾಖೆ ಮತ್ತು ಆಡಳಿತ ಶಾಖೆ, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇಲ್ಲಿಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ರವರಿಗೆ,
1. ಸಹ ನಿರ್ದೇಶಕರು (ಗುಣಮಟ್ಟ ಖಾತರಿ), ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
2. ಜಿಲ್ಲಾ ಉಪ ನಿರ್ದೇಶಕರು, (ಆಡಳಿತ) ಸಾ.ಶಿ.ಇ ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ.

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01, ಕರ್ನಾಟಕ
E-mail ID:icps.kar@gmail.com Ph.No.080-22879381/82

ದಿನಾಂಕ:18-8-2020

ಸಂಖ್ಯೆ:ಕರಾಮರಸೊ/ಐಇಸಿ/ವಿದ್ಯಾಗಮ/19/2020-21

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು

ವಿಷಯ: ವಿದ್ಯಾಗಮ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಬಗ್ಗೆ.

ಉಲ್ಲೇಖ:(1)ಐಸಿಪಿಎಸ್/ಜೆಸಿಎಲ್/WP4/2020/16/2020-21 ದಿನಾಂಕ:7-8-2020
(2)ಐಸಿಪಿಎಸ್/ಜೆಸಿಎಲ್/WP4/2020/16/2020-21 ದಿನಾಂಕ:8-8-2020
(3)ಸಾ.ಶಿ.ಇ ಪತ್ರ ಸಂಖ್ಯೆ: ಸಿ3/DIRP/140JDA2020/ವಿನೋಅ/13553 ದಿನಾಂಕ:10-8-2020
(4)ಕೆಎಸ್ಐಸಿಪಿಎಸ್/ಕೋವಿಡ್-19/54/2020-21, ದಿನಾಂಕ:25.04.2020.

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರ (1)ರಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಿಂದ ಮನೆಗೆ ತೆರಳಿರುವ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಸಾರ್ವಜನಿಕ ಶಿಕ್ಷಣ ಇಲಾಖೆ ಜಾರಿಗೆ ತಂದಿರುವ ವಿದ್ಯಾಗಮ ಕಾರ್ಯಕ್ರಮದ ಅನುಷ್ಠಾನಗೊಳಿಸಲು ಕೋರಲಾಗಿದೆ. ಉಲ್ಲೇಖಿತ ಪತ್ರ (2)ರಲ್ಲಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬರುವ ಮಕ್ಕಳಿಗೆ ಸದರಿ ಕಾರ್ಯಕ್ರಮದ ಅನುಷ್ಠಾನದಲ್ಲಿ ಎದುರಾಗಬಹುದಾದ ತೊಡಕುಗಳನ್ನು ಆಗಿಂದಾಗ್ಗೆ ಬಗೆಹರಿಸಲು ಅನುಕೂಲವಾಗುವಂತೆ ಸಹಕರಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ಸರ್ವಶಿಕ್ಷಣ ಅಭಿಯಾನ ಇವರನ್ನು ಕೋರಲಾಗಿತ್ತು

ಅದರಂತೆ ಉಲ್ಲೇಖಿತ ಪತ್ರ(3)ರಲ್ಲಿ ಸದರಿ ಕಾರ್ಯಕ್ರಮ ಅನುಷ್ಠಾನಗೊಳಿಸುವಲ್ಲಿ ಎದುರಾಗಬಹುದಾದ ತೊಡಕುಗಳನ್ನು ಪರಿಹರಿಸಲು ಸಹ ನಿರ್ದೇಶಕರು(ಗುಣಮಟ್ಟ ಖಾತರಿ) ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು ಇವರನ್ನು ರಾಜ್ಯ ನೋಡಲ್ ಅಧಿಕಾರಿಯಾಗಿ ಮತ್ತು ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ಸಾ.ಶಿ.ಇ ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಇವರನ್ನು ಜಿಲ್ಲಾ ನೋಡಲ್ ಅಧಿಕಾರಿಗಳಾಗಿ ನೇಮಿಸಿ ಜ್ಞಾಪನ ಪತ್ರವನ್ನು ಹೊರಡಿಸಿರುತ್ತಾರೆ. ಸದರಿ ಪತ್ರವನ್ನು ಲಗತ್ತಿಸಿದೆ.

ವಿದ್ಯಾಗಮ ಕಾರ್ಯಕ್ರಮ ಅನುಷ್ಠಾನಗೊಳಿಸುವಲ್ಲಿ ನೋಡಲ್ ಅಧಿಕಾರಿಗಳ ಸಹಕಾರವನ್ನು ಪಡೆದುಕೊಂಡು ಸರ್ಕಾರಿ/ಸರ್ಕಾರದ ಅನುದಾನ ಪಡೆಯುತ್ತಿರುವ ಮತ್ತು ಖಾಸಗಿ CCI ಗಳಿಂದ ಮನೆಗೆ/ಕುಟುಂಬಗಳಿಗೆ ಮರಳಿರುವ ಪ್ರತಿಯೊಂದು ಮಗೂ ಸಹ ವಿದ್ಯಾಗಮ ಕಾರ್ಯಕ್ರಮದ ಅಡಿಯಲ್ಲಿ ಶಿಕ್ಷಣ ಪಡೆಯುವಂತೆ ಖಚಿತಪಡಿಸತಕ್ಕದ್ದು ಹಾಗೂ ಈ ಬಗ್ಗೆ ಕನಿಷ್ಠ ವಾರದಲ್ಲಿ ಎರಡು ಬಾರಿ ಅನುಸರಣೆ ಮಾಡಿ ದಿನನಿತ್ಯ COVID-DCPO Watsapp Group ನಲ್ಲಿ ಹಾಗೂ ವಾರಕ್ಕೊಮ್ಮೆ ಉಲ್ಲೇಖ 4ರಲ್ಲಿನ ನಮೂನೆಯಂತೆ ಪ್ರಧಾನ ಕಛೇರಿಗೆ ವರದಿ ಮಾಡತಕ್ಕದ್ದು.

ತಮ್ಮ ವಿಶ್ವಾಸಿ
18.08.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.